

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

Volume : 08 | Issue : 14 | Wednesday 17-09-2025 | E-mail : maruti.b.hosamani76@gmail.com | Page: 4 | Price : Rs. 1/-


# ಊಟದ ಜೋಳ ಮತ್ತು ಮೆಕ್ಕೆಜೋಳ–ಖರೀದಿ ಕೇಂದ್ರಕ್ಕೆ ಆಗ್ರಹ

**ಸಿಹಿ ಕಹಿ ಸುದ್ದಿ,**

**ಕೊಟ್ಟೂರು** : ಕೊಟ್ಟೂರು ತಾಲೂಕ ಕಾರ್ಯಾಲಯದ ಮುಂದೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಉಪಾಧ್ಯಕ್ಷರಾದ ಎನ್.ಭರಮಣ್ಣ ನವರು ಊಟದ ಜೋಳ ಮೆಕ್ಕೆಜೋಳ ಖರೀದಿ ಕೇಂದ್ರ ಶೀಘ್ರದಲ್ಲಿ ತೆರೆಯಬೇಕು. ಕೊಟ್ಟೂರು ಮತ್ತು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಪ್ರಸಕ್ತ 2025–26 ನೇ. ಸಾಲಿನಲ್ಲಿ ಕೊಟ್ಟೂರು ತಾಲೂಕಿನ ರೈತರು ಊಟದ ಜೋಳ, ಮೆಕ್ಕೆ ಜೋಳ ಬೆಳೆದಿದ್ದು ಇಂದಿನ ವರ್ಷ ಸರ್ಕಾರದಿಂದ ರೂ. 3370 ಬೆಂಬಲ ಬೆಲೆ ಖರೀದಿಸಿದ್ದು.






ಆದರೆ ಈ ವರ್ಷ ಇನ್ನೂ ಖರೀದಿ ಕೇಂದ್ರ ತೆರೆದಿರುವುದಿಲ್ಲ. ಎ.ಪಿ.ಎಂ.ಸಿ ಮಾರುಕಟ್ಟೆಯ ಖರೀದಿದಾರರು ಕ್ವಿಂಟಲ್ಲಿಗೆ 1500 ರಿಂದ 2000 ರೂ. ಬರೆಯುತ್ತಿರುವುದರಿಂದ ರೈತರು ತುಂಬಾ ನಷ್ಟ ಅನುಭವಿಸುತ್ತಿದ್ದಾರೆ ಕಾರಣ ಕೂಡಲೇ ಖರೀದಿ ಕೇಂದ್ರ ತೆರೆದು ರೈತರು ಬೆಳೆದ ಊಟದ ಜೋಳ, ಮೆಕ್ಕೆಜೋಳ ಖರೀದಿಸಿ ಮತ್ತು ಕೊಟ್ಟೂರ ತಾಲೂಕಿನ ಈರುಳ್ಳಿ ಬೆಳೆಗಾರರಿಗೆ ಅನ್ಯಾಯವಾಗಿರುವುದನ್ನು ಗಮನಿಸಿ ಈರುಳ್ಳಿ ಬೆಳೆದ ರೈತರ ಹೊಲಕ್ಕೆ ಗ್ರಾಮ ಲೆಕ್ಕಾಧಿಕಾರಿಗಳ ಕಳುಹಿಸಿ ಸರ್ಕಾರಕ್ಕೆ ವರದಿ ಒಪ್ಪಿಸಿ ಒಂದು ಎಕ್ಕರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ನೀಡುವುದರ ಮೂಲಕ ರೈತರಿಗೆ ನ್ಯಾಯ ಒದಗಿಸ ಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಎನ್.ಭರಮಣ್ಣ ಹಾಗೂ ಶ್ರೀಧರ.ಎಸ್ ಒಡೆಯರ್ ತಾಲೂಕು ಅಧ್ಯಕ್ಷರು ಹಾಗೂ ಸಂಘದ ಸದಸ್ಯರುಗಳು ಹಾಗೂ ರೈತ ಮುಖಂಡರು ಗ್ರೇಡ್ 2 ತಹಶೀಲ್ದಾರರ ಮೂಲಕ ಮಾನ್ಯ ಜಿಲ್ಲಾಧಿಕಾರಿಗೆ ಮನವಿ ಮಾಡಿ ಕೊಂಡರು. ಈ ಸಂದರ್ಭದಲ್ಲಿ ಕೊಲ್ಲೂರಪ್ಪ ಕಂದಗಲ್ಲು ಚೆನ್ನಪ್ಪ ಹನುಮನಹಳ್ಳಿ ಎಸ್ ಶರಣಯ್ಯ ಮಂಜಪ್ಪ ಚೌಡಪ್ಪ ಜಿ ನಾಗರಾಜ್ ಮತ್ತಿತರ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

# "ಸಂಗಮಸಿರಿ" ರಾಜ್ಯಮಟ್ಟದ ಪ್ರಶಸ್ತಿಗೆ – ಕೃತಿಗಳ ಆಹ್ವಾನ

**ಸಿಹಿ ಕಹಿ ಸುದ್ದಿ,**

**ಹುಬ್ಬಳ್ಳಿ** : ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಹಿತಿ ಡಾ, ಸಂಗಮೇಶ ಹಂಡಿಗಿ ಅವರ ಸ್ಮರಣೆಯಲ್ಲಿ ಡಾ, ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನ ನೀಡುವ 2025 ನೇ. ಸಾಲಿನ ರಾಜ್ಯಮಟ್ಟದ "ಸಂಗಮಸಿರಿ" ಪ್ರಶಸ್ತಿಯನ್ನು 'ಶರಣರು ಹಾಗೂ ವಚನ ಸಾಹಿತ್ಯ' ದ ಪೂರಕ ಕೃತಿಗಳಿಗೆ ಈ ವರ್ಷದ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ. ಈ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರು ತಮ್ಮ ಮಾಹಿತಿಯನ್ನು ಹಾಗೂ ಸಾಹಿತ್ಯದ ವಿವರಗಳನ್ನು ಅಕ್ಟೋಬರ್ 15 ರ ಒಳಗೆ ಡಾ, ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನ, ಮನೆ ನಂಬರ್ 338, ಬಸವ ಬನಸಿರಿ, ಗೋಕುಲ್ ರಸ್ತೆ ಹುಬ್ಬಳ್ಳಿ 580030. ಗೆ ಕಳಿಸಲು ಪ್ರತಿಷ್ಠಾನದ ಅಧ್ಯಕ್ಷ ಜಿ.ಬಿ ಗೌಡಪ್ಪಗೊಳ, ಗೌರವಾಧ್ಯಕ್ಷ ಗಣಪತಿ ಗಂಗೊಳ್ಳಿ, ಸಂಯೋಜಕ ಡಾ, ಪ್ರಭು ಗಂಜಿಹಾಳ ತಿಳಿಸಿದ್ದಾರೆ. ಪ್ರಶಸ್ತಿಯು 10 ಸಾವಿರ ರೂ. ನಗದು ಹಾಗೂ ಫಲಕ ಹೊಂದಿದೆ. ಮಾಹಿತಿಗೆ ಮೋ. 9060933596, 99864 76733 ಗೆ ಸಂಪರ್ಕಿಸ ಬಹುದು.



**ಡಾ, ಪ್ರಭು ಗಂಜಿಹಾಳ, ಮೊ:9448775346**

# ಒಳ ಮೀಸಲಾತಿ ಹೋರಾಟಗಾರರಿಗೆ – ಅಭಿನಂದನಾ ಸಮಾರಂಭ

**ಸಿಹಿ ಕಹಿ ಸುದ್ದಿ,**

**ಮಾನ್ವಿ** : ರಾಜ್ಯದಲ್ಲಿ ಸಾಮಾಜಿಕ ಸಮೀಕ್ಷೆಯ ಮೂಲಕ ನಡೆಸಿದ ಸದಾಶಿವ ಆಯೋಗ,ಮಾಧುಸ್ವಾಮಿ ಆಯೋಗ ಹಾಗೂ ನ್ಯಾಯಮೂರ್ತಿ ನಾಗಮೋಹನ್ ದಾಸ ಏಕ ಸಮಿತಿ ಆಯೋಗ ಸಮೀಕ್ಷೆ ನಡೆಸಿ ತಮ್ಮ ವರದಿಗಳನ್ನು ಸರ್ಕಾರಕ್ಕೆ ಒಳ ಮೀಸಲಾತಿ ವರದಿ ಸಲ್ಲಿಸಿದ ನಂತರ ಮಾದಿಗ ಸಮುದಾಯದಕ್ಕೆ ಶೇಕಡವಾರು 6 ತಲುಪಿದೆ ಎಂದು ಮಾನ್ವಿ ತಹಸೀಲ್ದಾರ್ ಭೀಮರಾಯ ರಾಮಸಮುದ್ರ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಬಿವಿಆರ್ ಶಾಲೆಯಲ್ಲಿ ಕರ್ನಾಟಕ ರಾಜ್ಯ ಮಾದಿಗ ನೌಕರರ ಸಂಘ ಹಮ್ಮಿಕೊಂಡಿದ್ದ ಒಳ ಮೀಸಲಾತಿ ಹೋರಾಟಗಾರರಿಗೆ ಅಭಿನಂದನಾ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ,

ನಮ್ಮ ಸಮುದಾಯದವರಿಗೆ ಸರ್ಕಾರದ ಮೀಸಲಾತಿಯ ಸೌಲಭ್ಯ ದೊರೆಯಬೇಕಾದಲ್ಲಿ ಸರ್ಕಾರದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು ಉನ್ನತ ಶಿಕ್ಷಣ ಪಡೆಯುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ ಎಂದರು.

ಹಿರಿಯ ಹೋರಾಟಗಾರ ಅಂಬಣ್ಣ ಅರೋಲಿಕರ್ ಮಾತನಾಡಿ, ನಮ್ಮ ಸಮುದಾಯದವರ ನಿರಂತರ ಮೂರು ದಶಕಗಳ ಹೋರಾಟದ ಫಲವಾಗಿ ರಾಜ್ಯ ಸರ್ಕಾರ ಒಳಮೀಸಲಾತಿಯನ್ನು ಜಾರಿ ಮಾಡಿದ್ದು, ಆದಿ ಆಂಧ್ರ ಮತ್ತು ಆದಿ ದ್ರಾವಿಡ ಗೊಂದಾಲ ನಿವಾರಣೆಗಾಗಿ ಹಾಗೂ ನಮ್ಮ ಸಮುದಾಯಕ್ಕೆ ಶೇ 7 ರಷ್ಟು ಹೆಚ್ಚಿನ ಮೀಸಲಾತಿಯನ್ನು ಪಡೆಯುವುದಕ್ಕಾಗಿ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಹುಸೇನ್.ಭಾಷಾ. ನಕ್ಕುಂದಿ.ಮಾನ್ವಿ**

# ಉತ್ತಮ ತಂತ್ರಜ್ಞಾನ, ಉತ್ತಮ ವ್ಯಕ್ತಿತ್ವ–ಬಿ.ಇ.ಸಿ.ಯ ಗುರಿ: ಡಾ. ಹೆರಕಲ್

**ಬಾಗಲಕೋಟೆ** : ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು (ಬಿ.ಇ.ಸಿ) ಬಾಗಲಕೋಟೆ ಜಿಲ್ಲೆಯಲ್ಲಷ್ಟೇ ಅಲ್ಲ, ಇಡೀ ಕರ್ನಾಟಕದಲ್ಲಿಯೇ ತಾಂತ್ರಿಕ ಶಿಕ್ಷಣದಲ್ಲಿ ಶ್ರೇಷ್ಠ ಇತಿಹಾಸವನ್ನು ಹೊಂದಿರುವ ಕಾಲೇಜು. ಉತ್ತಮ ತಂತ್ರಜ್ಞಾನ, ವಿಶ್ವ ಮಟ್ಟದ ವೃತ್ತಿಪರ ಕೌಶಲ್ಯಗಳೊಂದಿಗೆ ಉತ್ತಮ ವ್ಯಕ್ತಿತ್ವವನ್ನು ರೂಪಿಸುವ ಶ್ರೇಷ್ಠ ಶೈಕ್ಷಣಿಕ ಸಂಸ್ಥೆಯಾಗಿದೆ ಎಂದು ಬಿವಿವಿಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಡಾ. ಆರ್. ಎನ್. ಹೆರಕಲ್ ಹೇಳಿದರು.

ಕಾಲೇಜಿನ ನೂತನ ಸಭಾಭವನದಲ್ಲಿ ಬಿಇ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪಾಲಕರ ಸಭೆ ಮತ್ತು ಇಂಜಿನಿಯರಿಂಗ್ ಪರಿಚಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, "ಪಾಲಕರು ಹಲವಾರು ನಿರೀಕ್ಷೆಗಳನ್ನು ಇಟ್ಟುಕೊಂಡು ಮಕ್ಕಳನ್ನು ಎಂಜಿನಿಯರಿಂಗ್ ಪದವಿಗೆ ಸೇರಿಸುತ್ತಾರೆ. ಶಿಕ್ಷಣದಿಂದ ಕೇವಲ ಉದ್ಯೋಗ ಪಡೆಯುವುದು ಗುರಿಯಾಗಬಾರದು. ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡು ದೇಶಕ್ಕೆ ಶ್ರೇಷ್ಠ ಇಂಜಿನಿಯರ್ ಆಗುವ ಉದ್ದೇಶವನ್ನು ಹೊಂದಿರಬೇಕು" ಎಂದರು. ಕಾಲೇಜಿನ




ಗುಣಮಟ್ಟದ ಶಿಕ್ಷಣ, ಆಧುನಿಕ ಸೌಲಭ್ಯಗಳು, ತಂತ್ರಜ್ಞಾನದ ಪರಿಚಯದೊಂದಿಗೆ ಬಿ.ಇ.ಸಿ ವಿದ್ಯಾರ್ಥಿಗಳು ಅಮೇರಿಕಾದ ಸಿಲಿಕಾನ್ ವ್ಯಾಲಿಯಲ್ಲಿಯೂ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಇಂಜಿನಿಯರಿಂಗ್ ಶಿಕ್ಷಣದ ಪ್ರಗತಿಯ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಬಿ. ಆರ್. ಹಿರೇಮಠ ಮಾತನಾಡಿ, ಯುಜಿ ಮತ್ತು ಪಿಜಿ ಕೋರ್ಸುಗಳು, ಕಾಲೇಜಿನ ಸಾಧನೆಯ ಪಯಣ ಮತ್ತು ಹೆಜ್ಜೆ ಗುರುತುಗಳ ಕುರಿತು ವಿವರಿಸಿದರು. ಡಾ. ಭಾರತಿ ಮೇಟಿ (ಹೆಡ್ ? ಬಯೋ ಟೆಕ್ನಾಲಜಿ & ಡೀನ್ ಸ್ಟೂಡೆಂಟ್ ವೆಲ್ಫೇರ್) ಸ್ವಾಗತಿಸಿದರು.

ಡಾ. ಎಸ್.ಆರ್. ಪಾಟೀಲ್ ಕಾರ್ಯಕ್ರಮದ ಸಂಯೋಜಕರಾಗಿ ನೂತನ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮದ ಕುರಿತಾಗಿ ಮಾಹಿತಿ ನೀಡಿದರು. ಡಾ. ಕೆ. ಚಂದ್ರಶೇಖರ್ (ಪರೀಕ್ಷಾ ವಿಭಾಗದ ನಿಯಂತ್ರಣಾಧಿಕಾರಿ) ಕಾಲೇಜಿನ ವಿವಿಧ ಜವಾಬ್ದಾರಿಯ ಪ್ರಾಧ್ಯಾಪಕರನ್ನು ಸಭೆಗೆ ಪರಿಚಯಿಸಿದರು. ಡಾ. ಪಿ. ಎನ್. ಕುಲಕರ್ಣಿ (ಅಕ್ಯಾಡಮಿಕ್ ಡೀನ್) ಶೈಕ್ಷಣಿಕ ಚಟುವಟಿಕೆಗಳು ಹಾಗೂ ಪ್ಲೇಸ್ಮೆಂಟ್ ಆಯ್ಕೆಗಳ ಕುರಿತು ಮಾತನಾಡಿದರು. ಡಾ. ಮಹಾಬಲೇಶ್ವರ ಎಸ್. (ಡೀನ್ ? ಖ&ಆ) ವಿದ್ಯಾರ್ಥಿಗಳು ಹೊಸ ತಂತ್ರಜ್ಞಾನಗಳ ಪ್ರಯೋಗಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ಅದರ ವೃತ್ತಿಪರ ಪ್ರಯೋಜನಗಳ ಬಗ್ಗೆ ವಿವರಿಸಿದರು.

ಕಾರ್ಯಕ್ರಮವನ್ನು ಡಾ. ಮಂಜುಳಾ ಸುತಗುಂಡಾರ ನಿರೂಪಿಸಿದರು.

ಬಿಇಸಿ ಸ್ವರ ತಂಡ ಪ್ರಾರ್ಥನಾ ಗೀತೆಯನ್ನು ಹಾಡಿತು. ಕೊನೆಗೆ ಇನ್ನೋರ್ವ ಸಂಯೋಜಕರಾದ ಡಾ. ಬಿ. ಜಿ. ಹೊಕ್ರಾಣಿ ವಂದನಾರ್ಪಣೆ ಸಲ್ಲಿಸಿದರು.

ಕರ್ನಾಟಕದ ವಿವಿಧ ಭಾಗಗಳಿಂದ ಆಗಮಿಸಿದ ಹಲವಾರು ಪಾಲಕರು ಸಂವಾದ ಕಾರ್ಯಕ್ರಮದಲ್ಲಿ ತಮ್ಮ ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡರು. ಒಟ್ಟು 2000ಕ್ಕೂ ಅಧಿಕ ಜನರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ವಕೀಲರ ವಿರುದ್ಧ ಅವಹೇಳನ: ಡಿಸಿಎಂ ವಿರುದ್ಧ ಪ್ರತಿಭಟನೆ




**ಬಾಗಲಕೋಟೆ:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಕೀಲರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಖಂಡಿಸಿ ಬಾಗಲಕೋಟೆ ವಕೀಲರ ಸಂಘದ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಯಿತು. ನಗರದ ನ್ಯಾಯಾಲಯ ಆವರಣದಿಂದ ಜಿಲ್ಲಾಡಳಿತ ಭವನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ವಕೀಲರು, "ಡಿ.ಕೆ. ಶಿವಕುಮಾರ್ ಡೌನ್ ಡೌನ್", "ವಕೀಲರ ಅವಹೇಳನೆ ಸಹಿಸಲಾರೆವು" ಎಂದು ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು. ಕಳೆದ ಸೆಪ್ಟೆಂಬರ್ 6ರಂದು ಆಲಮಟ್ಟಿಗೆ ಬಾಗೀನ ಅರ್ಪಿಸಲು ಆಗಮಿಸಿದ್ದ ಡಿ.ಕೆ. ಶಿವಕುಮಾರ್ ಅವರು, "ಕೃಷ್ಣ ಮೇಲ್ದಂಡೆ ಯೋಜನೆಯ ಸಂತ್ರಸ್ತ ರೈತರಿಗೆ ಪರಿಹಾರದ ವಿಷಯದಲ್ಲಿ ವಕೀಲರು ದಾರಿತಪ್ಪಿಸುತ್ತಿದ್ದಾರೆ" ಎಂದು ಹೇಳಿಕೆ ನೀಡಿದ್ದರು. ಈ ಹೇಳಿಕೆಯನ್ನು ವಕೀಲರು ತೀವ್ರವಾಗಿ ಖಂಡಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಕೀಲರು, ಡಿಸಿಎಂ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿದರು. ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.ಈ ವೇಳೆ ಮಾತನಾಡಿದ ಹಿರಿಯ ವಕೀಲರು , ಡಿ.ಕೆ. ಶಿವಕುಮಾರ್ ಅವರು ತಕ್ಷಣವೇ ವಕೀಲರ ಸಮುದಾಯದ ಮುಂದೆ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ವಕೀಲರು ಉಗ್ರ ಹೋರಾಟ ಹಮ್ಮಿಕೊಳ್ಳುವಂತಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

# ಹಳ್ಳಿಗಳೇ ಇತಿಹಾಸ, ಸಾಂಸ್ಕೃತಿಗೆ ಮೂಲ ಕೇಂದ್ರಗಳು

## ಸೀಮಿಕೇರಿಯಲ್ಲಿ ಜರಗಿದ ನಮ್ಮೂರ ತಿಳಿಯೋಣ ಬಾರ–1 ಕಾರ್ಯಕ್ರಮ

**ಬಾಗಲಕೋಟೆ** : ನಾಡಿನ ಸಂಸ್ಕೃತಿಕ ಪರಂಪರೆ ಹಳ್ಳಿಗಳಲ್ಲಿ ಅಡಗಿದೆ. ಈ ಸಾಂಸ್ಕೃತಿಕ ಪರಂಪರೆಗೆ ಸಾಕ್ಷಿಯಾಗಿ ಇತಿಹಾಸದಲ್ಲಿ ಸಿಗುವ ಮೂಲ ಆಕರಗಳು ಅದಕ್ಕೆ ಪೂರಕ ಸಾಧನೆಗಳಾಗಿವೆ ಎಂದು ಡಾ ವಿಜಯಕುಮಾರ ಕಟಗಿಹಳ್ಳಿಮಠ ಹೇಳಿದರು.

ಅವರು ಸೀಮಿಕೇರಿ ಗ್ರಾಮದಲ್ಲಿ ಹಂಪೆ ಕಟ್ಟಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕೂಟ ಹಮ್ಮಿಕೊಂಡಿದ್ದ ನಮ್ಮೂರ ತಿಳಿಯೋಣ ಬಾರ–1 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ನಾಗರಿಕತೆಗಳು ಅರಳಿದ್ದು ನದಿಗಳ ತೀರದಲ್ಲಿ ಅನಂತರ ಕಾಲಾನುಕ್ರಮದಲ್ಲಿ ಪ್ರಗತಿಯ ಸೋಗಿನಲ್ಲಿ ಹಾಗೂ ಆಧುನಿಕತೆಯ ಭರಾಟೆಯಲ್ಲಿ ನಮ್ಮತನವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಎಂದು ಖೇದ ವ್ಯಕ್ತಪಡಿಸಿದರು. ಅದಕ್ಕೆ ನಾವು ಈಗ ಆಧುನಿಕತೆಯೊಂದಿಗೆ ಮೂಲ ಪರಿಕಲ್ಪನೆಯನ್ನು ಅರಿತುಕೊಂಡು ನಡೆಯಬೇಕಾಗಿದೆ ಎಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಅಶೋಕ



ಕಂದಗಲ್ಲ ಸಣ್ಣ ಸಣ್ಣ ಸ್ಥಾನಿಕ ಸಂಗತಿಗಳು ಇತಿಹಾಸಕ್ಕೆ ಪುಷ್ಟಿಯನ್ನು ನೀಡಿ ಮೌಲ್ಯವರ್ಧನೆಗೆ ಪೂರಕ ಐತಿಹಾಸಿಕ ವಾತಾವರಣವನ್ನು ನಿರ್ಮಿಸಲು ಸಹಕಾರಿಯಾಗಿದೆ. ಗ್ರಾಮಗಳಲ್ಲಿ ಸಿಗುವ ಐತಿಹಾಸಿಕ ಕುರುಹುಗಳಿಂದ ಇತಿಹಾಸ ರಚಿಸಲು ತುಂಬಾ ಸಹಕಾರಿಯಾಗಿದೆಯೆಂದ ಅವರು ಭಾರತ ದೇಶ ಹಳ್ಳಿಗಳಿಂದ ಕೂಡಿದ ರಾಷ್ಟ್ರ ಆ ಹಳ್ಳಿಗಳಲ್ಲಿ ಸಿಗುವ ಐತಿಹಾಸಿಕ ಕುರುಹುಗಳಿಂದ ಇತಿಹಾಸದ ಕಾಲಾನುಕ್ರಮವನ್ನು ವ್ಯವಸ್ಥಿತವಾಗಿ ರೂಪಿಸಲು ಸಹಾಯಕಾರಿಯಾಗಿದೆಯೆಂದು ಹೇಳಿದರು. ವೀರಗಲ್ಲುಗಳು ಮಾಸ್ತಿ ಗಲ್ಲುಗಳು ತಿಳಿಸುವ ವಿಚಾರಗಳು ನಾಡಿನ ಜನರ ಶೌರ್ಯ ಪರಾಕ್ರಮಗಳನ್ನು ವಿಶ್ಲೇಷಿಸಲು ತುಂಬಾ ಸಹಾಯಕಾರಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮದ ಹಿರಿಯರಾದ ಶ್ರೀ ಮಹದೇವಪ್ಪ ನಿಂ.ತಳವಾರ ವಹಿಸಿ ಅಧ್ಯಕ್ಷೆಯ ಸಮಾರೋಪದಲ್ಲಿ ಹಂಪೆಕಟ್ಟೆ ಸಾಹಿತ್ಯ ಹಾಗೂ ಸಂಸ್ಕೃತಿಕ ಕೂಟ ಹಾಗೂ ಗ್ರಾಮದಲ್ಲಿರುವ ಸಂಸ್ಕೃತಿಕ ಘಟಕಗಳನ್ನು ಸಂರಕ್ಷಿಸುವ ಕೆಲಸವನ್ನು ಗ್ರಾಮ ಪಂಚಾಯಿತಿಯಿಂದ ಮಾಡಲಾಗುವದೆಂದು ತಮ್ಮ ಸಮಾರೋಪ ಭಾಷಣದಲ್ಲಿ ಆಶ್ವಾಸನೆ ನೀಡಿದರು.

ಸಂವಾದ ಕಾರ್ಯಕ್ರಮದಲ್ಲಿ ಎಚ್ ಐ ನಾಯಕ, ಕಲ್ಲಪ್ಪ ಸಿರಬಡಗಿ, ರಮೇಶ ತಳವಾರ, ಶಂಕ್ರಪ್ಪ ಅಗಸರ, ಕೆಂಚಪ್ಪ ತೆಗ್ಗಿ, ಈರಣ್ಣ ಶಿ.ನಾಯಕ, ಬಸವರಾಜ ಕುಂಬಾರ, ಈರಪ್ಪ ಜಂಗನ್ನವರ, ಬಾಲಪ್ಪ ಜಮ್ಮನಕಟ್ಟಿ, ರಮೇಶ ತೆಗ್ಗಿ ಭಾಗವಹಿಸಿದ್ದರು. ಶ್ರೀ ಹನುಮಂತರಾವ ದೇಸಾಯಿ, ಮಲ್ಲಿಕಾರ್ಜುನ ತಳವಾರ ಪ್ರಕಾಶ ಖಾಡೆ ಉಪಸ್ಥಿತರಿದ್ದರು.

ಗುರುನಾಥ ತಳವಾರ ಗುರುತಿಸಿರುವ ವೀರಗಲ್ಲು ಈ ಕಾರ್ಯಕ್ರಮದ ಕೇಂದ್ರ ಬಿಂದುವಾಗಿತ್ತು.ಕಾರ್ಯಕ್ರಮದಲ್ಲಿ ವಿಠ್ಠಲ ತಳವಾರ ಪ್ರಾರ್ಥಿಸಿದರು. ಬಸವರಾಜ ನಾಯಕ ಸ್ವಾಗತಗೀತೆ ಹಾಡಿದರು.ವಿರುಪಾಕ್ಷಿ ಗಂಗೂರ ಸ್ವಾಗತಿಸಿದರು. ಮುತ್ತಣ್ಣ ಇಂಗಳಗಿ ಪರಿಚಯಿಸಿದರು. ಬಸವರಾಜ ನಾಯಕ ನಿರೂಪಿಸಿದ ಕಾರ್ಯಕ್ರಮವನ್ನು ಮಲ್ಲಿಕಾರ್ಜುನ ತಳವಾರ ವಂದಿಸಿದರು. ಕಾರ್ಯಕ್ರಮದಲ್ಲಿ ಶಿವಣ್ಣ ಅವರಾದಿ,ಬಸಪ್ಪ ಚಿನ್ನಾಪುರ, ರಾಮನ್ನ ಸುನಗದ, ಮಲ್ಲಪ್ಪ ಕಪಲಿ ಅಲ್ಲದೆ ಗ್ರಾಮದ ಸಾರ್ವಜನಿಕರು ಭಾಗವಹಿಸಿದ್ದರು.

## ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಒಂದು ದಿನದ ಕಾರ್ಯಾಗಾರ

# ವಾಣಿಜ್ಯ ಪದವಿ ಪಡೆದ ವಿದ್ಯಾರ್ಥಿಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳಿವೆ. : ಡಾ. ಕವಿತಾ ಮುತ್ತಪ್ಪ

**ಬಾಗಲಕೋಟೆ** : ಸ್ನಾತಕೋತ್ತರ ನಂತರದ ವೃತ್ತಿ, ಹಾದಿ ಬಹಳ ವಿಶಾಲವಾಗಿದೆ. ಆಸಕ್ತಿ, ಕೌಶಲ್ಯ ಮತ್ತು ನಿರಂತರ ಅಧ್ಯಯನದ ಮೇಲೆ ಅವಲಂಬಿತವಾಗಿ ಶಿಕ್ಷಣ, ಉದ್ಯೋಗ, ಉದ್ಯಮ ಹೀಗೆ ಎಲ್ಲ ದಿಕ್ಕುಗಳಲ್ಲಿ ಅವಕಾಶಗಳು ತೆರೆದಿವೆ ಎಂದು ಬೀಳಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೀಳಗಿಯ ಸಹಾಯಕ ಪ್ರಾಧ್ಯಾಪಕರಾದ ಡಾ. ಕವಿತಾ ಮುತ್ತಪ್ಪ ಹೇಳಿದರು.



ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಒಂದು ದಿನದ ಕಾರ್ಯಾಗಾರವನ್ನು "ವಾಣಿಜ್ಯ ಸ್ನಾತಕೋತ್ತರ ನಂತರದ ವೃತ್ತಿ ಅವಕಾಶಗಳು" ಎಂಬ ವಿಷಯದ ಮೇಲೆ ಹಮ್ಮಿಕೊಂಡಿದ್ದ ಉಪನ್ಯಾಸದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಮಾತನಾಡಿದ ಅವರು ವಿದ್ಯಾಭ್ಯಾಸವು ವ್ಯಕ್ತಿಯ ಬದುಕಿನಲ್ಲಿ ಬೆಳಕಿನಂತೆ ಮಾರ್ಗದರ್ಶನ ನೀಡುತ್ತದೆ. ಅದರಲ್ಲೂ ವಾಣಿಜ್ಯಕ್ಷೇತ್ರದಲ್ಲಿ ಸ್ನಾತಕೋತ್ತರ (ಒ.ಅಂಟ) ಪದವಿ ಪಡೆದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಅನೇಕ ವೃತ್ತಿ ಹಾದಿಗಳು ತೆರೆದಿವೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಪದವಿ ಸಾಕಾಗದೆ, ಉನ್ನತ ವಿದ್ಯಾಭ್ಯಾಸ ಮತ್ತು ತಜ್ಞ ಜ್ಞಾನವನ್ನು ಹೊಂದಿರುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತಿವೆ. ಈ ಹಿನ್ನೆಲೆಯಲ್ಲಿ ಎಂ.ಕಾಂ ನಂತರದ ವೃತ್ತಿ ಕ್ಷಿತಿಜವನ್ನು ಅನ್ವೇಷಿಸುವುದು ಅತ್ಯಂತ ಅವಶ್ಯಕ. ಎಂ.ಕಾಂ, ಪದವಿ ಪಡೆದ ವಿದ್ಯಾರ್ಥಿಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳಿವೆ. ಪ್ರಾಧ್ಯಾಪಕರಾಗಲು ಅಥವಾ ಸಂಶೋಧಕರಾಗಲು ನೆಟ್/ಸೆಟ್ ಪರೀಕ್ಷೆಗಳನ್ನು ಉತ್ತೀರ್ಣಗೊಳ್ಳಬಹುದು. ಹೀಗೆಯೇ ಪಿ.ಎಚ್.ಡಿ. ಪದವಿಯನ್ನು ಪಡೆದರೆ ಸಂಶೋಧನಾ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡುವ ಅವಕಾಶ ಸಿಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ.ಜಗನ್ನಾಥ ಚವ್ಹಾಣ ಅವರು ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರವೂ ಎಂ.ಕಾಂ, ಪದವೀಧರರಿಗೆ ಭರವಸೆಯ ಉದ್ಯೋಗ ಕ್ಷೇತ್ರವಾಗಿದೆ. ವಾಣಿಜ್ಯ ಜ್ಞಾನ, ಅಕೌಂಟಿಂಗ್ ಹಾಗೂ ಹಣಕಾಸು ನಿರ್ವಹಣೆಯಲ್ಲಿ ಪರಿಣತಿ ಹೊಂದಿರುವವರಿಗೆ ಬ್ಯಾಂಕುಗಳು, ವಿಮಾ ಕಂಪನಿಗಳು, ಹೂಡಿಕೆ ಸಂಸ್ಥೆಗಳು ಹಾಗೂ ಮಲ್ಟಿನ್ಯಾಷನಲ್ ಕಂಪನಿಗಳಲ್ಲಿ ಉತ್ತಮ ಹುದ್ದೆಗಳು ದೊರೆಯುತ್ತವೆ ಎಂದರು. ಸಿಬ್ಬಂದಿ ಕಾರ್ಯದರ್ಶಿ ಡಾ.ಎಂ.ನಂಜುಂಡಸ್ವಾಮಿ, ಐಕ್ಯೂಎಸ್.ಸಂಯೋಜಕರಾದ ಗಿರಿಜಾ ನಾವದಗಿ, ಸಹಾಯಕ ಪ್ರಾಧ್ಯಾಪಕರಾದ ಅಲ್ಲಾಜ್ ಭಾಗವನ್, ಎಂ,ಕಾಂ ವಿಭಾಗದ ಮುಖ್ಯಸ್ಥರಾದ ಕವಿತಾ ಮಳಜಿ, ಸಾಗರ ಭೆಬ್ಬಿ ಉಪಸ್ಥಿತರಿದ್ದರು.

## ಒಂದು ಅಪರೂಪದ ಕಾರ್ಯಕ್ರಮ

# ಓದಿನ ಪ್ರೀತಿಯ ಹಿರಿಯಜ್ಜಿಯೊಡನೆ ಕೆಲ ಸಾರ್ಥಕ ಕ್ಷಣಗಳು



ಕೃಷ್ಣಮೂರ್ತಿ ಪುರಾಣಿಕರು ನಾಡಿನ ಓದುಗರ ಮೆಚ್ಚಿನ ಕಾದಂಬರಿಕಾರರು. ಕರ್ನಾಟಕದ ತುಂಬ ಪುಸ್ತಕ ವಾಚನ ಸಂಸ್ಕೃತಿಯನ್ನು ಬೆಳೆಸಿದವರಲ್ಲಿ ಅವರು ಅಗ್ರಗಣ್ಯರು. ಅವರ ಕಾದಂಬರಿಗಳು 50–80 ರ ದಶಕದ ಹೆಂಗಳೆಯರಲ್ಲಿ ದಿನನಿತ್ಯದ ಓದಿನ ಹವ್ಯಾಸವನ್ನು ಹುಟ್ಟುಹಾಕಿದ್ದವು. ಅಂತಹ ಒಬ್ಬರು ಹಿರಿಯ ಓದುಗರನ್ನು ಇಂದು ಕೃಷ್ಣಮೂರ್ತಿ ಪುರಾಣಿಕರ 114 ನೇ ಜನ್ಮದಿನ ಕಾರ್ಯಕ್ರಮದ ಸಂದರ್ಭದಲ್ಲಿ ಕಾಣುವ ಮತ್ತು ಸತ್ಕರಿಸುವ ಅಪೂರ್ವ ಸಂದರ್ಭ ಬಂತು.

ಅವರೇ 91 ವರ್ಷ ವಯಸ್ಸಿನ ಸನ್ಮತಿ ಉಪಾಧ್ಯೆಯವರು. ಬೆಳಗಾವಿಯ ಮಹಾಂತೇಶನಗರದ ನಿವಾಸಿಯಾಗಿರುವ ಅವರ ಮನೆಗೆ ಭೆಟ್ಟಿ ಕೊಟ್ಟ ನಮ್ಮ ಸಾಹಿತ್ಯಬಳಗ ಅವರೊಡನೆ ಅರ್ಧ ಗಂಟೆ ಕಾಲ ಕಳೆದು ಅವರ ಬಾಯಿಂದಲೇ ಅನುಭವಗಳನ್ನು ಕೇಳಿದೆವು. ಪುರಾಣಿಕರು, ಬ.ಕ. , ಮಿರ್ಜಿ ಅಣ್ಣಾರಾಯರ ಸಹಿತ ಅಸಂಖ್ಯಾತ ಕಾದಂಬರಿಕಾರರ ಕೃತಿಗಳನ್ನು ಆರೇಳು ದಶಕಗಳಿಂದಲೂ ಓದುತ್ತ ಬಂದ ಸನ್ಮತಿಯವರು ಆ ಬಗ್ಗೆ ಬಹಳ ಉತ್ಸಾಹದಿಂದ ಮಾತಾಡುತ್ತಾರೆ. ತೊಂಬತ್ತೊಂದರ ಇಳಿವಯಸ್ಸಿನಲ್ಲೂ ಅವರ ಮಾತು ಕಿವಿ ಕಣ್ಣು ಎಲ್ಲ ಸ್ಪಷ್ಟ. ಅವರ ಅಪಾರ ಪುಸ್ತಕ ಪ್ರೀತಿ ಎದ್ದುಕಾಣುತ್ತಿತ್ತು.

ಕೃಷ್ಣಮೂರ್ತಿ ಪುರಾಣಿಕ ಪ್ರತಿಷ್ಠಾನದ ಪರವಾಗಿ ಅವರಿಗೆ ಶಾಲು ಮಾಲೆ ಸಿಹಿ ಸಹಿತ ಸತ್ಕರಿಸಲಾಯಿತು. ಎಲ್. ಎಸ್. ಶಾಸ್ತ್ರಿ, ಆನಂದ ಪುರಾಣಿಕ, ಡಾ. ರಾಮಕೃಷ್ಣ ಮರಾಠೆ, ಡಾ. ಯಾಕೊಳ್ಳಿ, ಡಾ. ನಿರ್ಮಲಾ ಬಟ್ಟಲ, ಡಾ. ಪಿ. ಜಿ. ಕೆಂಪಣ್ಣವರ, ಶ್ರೀ ರಮೇಶ ಜಂಗಲ್, ಬಸವರಾಜ ಗಾರ್ಗಿ, ಹೇಮಾ ಸೊನೊಳ್ಳಿ, ಮಂಜುನಾಥ ಕಲಾಲ, ರಾಮನಾಥ ಬನಶಂಕರಿ, ಚಂದ್ರಶೇಖರ ನವಲಗುಂದ ಇವರು ಉಪಸ್ಥಿತರಿದ್ದರು. ಸನ್ಮತಿಯವರ ಮಗಳು ಶೀಲಾ ಉಪಾಧ್ಯಾಯ, ಸೊಸೆಯಂದಿರಾದ ಕವಿತಾ , ಪದ್ಮಾ, ಮೊಮ್ಮಗ ರೋಹನ್ ಎಲ್ಲರಿಗೂ ಪ್ರೀತಿಯ ಆತಿಥ್ಯ ನೀಡಿದರು.

ಕನ್ನಡದ ಓರ್ವ ಹಿರಿಯ ಓದುಗರನ್ನು ಕಂಡು ಮಾತಾಡಿ ಎಲ್ಲರೂ ಸಂತಸ ಪಟ್ಟರು. ಪುರಾಣಿಕರ ಜನ್ಮದಿನ ಅದರೊಂದಿಗೆ ಸಾರ್ಥಕವೆನಿಸಿತು.

# ಕಲಬುರಗಿ ವಲಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ

## ಭಾವಿ ವೈದ್ಯರು ಕ್ರೀಡೆಗಳಲ್ಲಿ ಭಾಗವಹಿಸುವುದು ಕ್ರೀಡೆಗೆ ಮೆರಗು



**ತೇರದಾಳ :** ಭಾವಿ ವೈದ್ಯರು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಕ್ರೀಡೆಗೆ ಮತ್ತಷ್ಟು ಮೆರಗು ಬಂದಂತಾಗಿದೆ ಎಂದು ರಾಯಬಾಗ ತಾಲೂಕಿನ ಹಾರೂಗೇರಿಯ ಎಲುಬು ಕೀಲುಗಳ ತಜ್ಞ ವೈದ್ಯ ಡಾ. ಸಂಜಯ ಪಾಟೀಲ ಹೇಳಿದರು.

ಇಲ್ಲಿನ ಎಸ್ಡಿಎಂ ಟ್ರಸ್ಟ ದಾನಿಗೊಂಡ ಆಯುರ್ವೇದ ವೈದ್ಯಕೀಯ ಕಾಲೇಜು ಹಾಗೂ ಬೆಂಗಳೂರಿನ ರಾಜೀವ ಗಾಂಧಿ ವಿಜ್ಞಾನ ವಿಶ್ವ ವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಎಸ್ಡಿಎಂ ಟ್ರಸ್ಟ್ ಆವರಣದಲ್ಲಿ ಹಮ್ಮಿಕೊಂಡಿರುವ ಕಲಬುರಗಿ ವಲಯದ ಮೆಡಿಕಲ್ ಕಾಲೇಜುಗಳ ಪುರುಷ ಹಾಗೂ ಮಹಿಳಾ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆಯಲ್ಲಿ ಕ್ರೀಡಾ ಮನೋಭಾವದಿಂದ ಪಾಲ್ಗೊಳ್ಳಿರಿ. ಕ್ರೀಡೆಯಿಂದ ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಸದೃಢರಾಗಲು ಸಾಧ್ಯ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಡಾ. ಮಹಾವೀರ ಎಸ್. ದಾನಿಗೊಂಡ ಮಾತನಾಡಿ, ಈ ಮೊದಲು ತಮ್ಮ ಸಂಸ್ಥೆಗೆ ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿ ಹಮ್ಮಿಕೊಳ್ಳಲು ರಾಜೀವ ಗಾಂಧಿ ವಿಜ್ಞಾನ ವಿವಿ ಅವಕಾಶ ನೀಡಿತ್ತು. ಈ ಬಾರಿ ವಲಯ ಮಟ್ಟದ ಅವಕಾಶ ನೀಡಿದೆ. ವೈದ್ಯಕೀಯ ಕೋರ್ಸ್ ಮುಗಿಸಿದ ಬಳಿಕ ನಂತರ ಯಾವುದೇ ಕ್ರೀಡೆ, ಮನರಂಜನೆಗೆ ಸಮಯ ಇರುವುದಿಲ್ಲ.

ಆದ್ದರಿಂದ ಕಲಿಕಾ ಸಂದರ್ಭದಲ್ಲಿರುವ ಕ್ರೀಡೆಗಳಲ್ಲಿ ಭಾಗವಹಿಸುವ ಅವಕಾಶ ತಪ್ಪಿಸಿಕೊಳ್ಳಬೇಡಿ ಎಂದು ಹೇಳಿದರು. ರಾಜೀವ ಗಾಂಧಿ ವಿಜ್ಞಾನ ವಿವಿಯ ನಟನಿಯೇಲ್ ಮಾತನಾಡಿದರು. ಕಾಲೇಜಿನ ಅಧೀಕ್ಷಕ ಡಾ. ಪಿ. ಬಿ. ಅಪರಾಜ ಪ್ರತಿಜ್ಞಾವಿಧಿ ಬೋಧಿಸಿದರು. ಡಾ. ಉಗಾರೆ, ದೈಹಿಕ ನಿರ್ದೇಶಕ ರಾಮು ಹಾಡಕರ ಹಾಜರಿದ್ದರು.

ಕಲಬುರಗಿ, ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯ ವಿವಿಧ ಮೆಡಿಕಲ್ ಕಾಲೇಜುಗಳಿಂದ ಪುರುಷರ ಹಾಗೂ ಮಹಿಳೆಯರ ತಂಡಗಳು ಆಗಮಿಸಿದ್ದು, ಸಪ್ಟೆಂಬರ್ 11 ರಂದು ಫೈನಲ್ ಪಂದ್ಯ ನಡೆಯಲಿವೆ.

# ಪ್ರಸಾದ ಸೇವಾ ಕಾರ್ಯಕ್ಕೆ ಹದಿನೈದು ವರ್ಷ ಪೂರ್ಣ



**ಬನಹಟ್ಟಿ :** ಇಲ್ಲಿನ ಕಾಡಸಿದ್ಧೇಶ್ವರ ಜಾತ್ರೆಯ ಸಂದರ್ಭದಲ್ಲಿ ನಡೆಯುವ ಪ್ರಸಾದ ಸೇವಾ ಸಮಿತಿಯು ಕಳೆದ ಹದಿನೈದು ವರ್ಷಗಳಿಂದ ಮೂರು ದಿನಗಳ ಕಾಲ ಪ್ರಸಾದ ಸೇವಾ ಕಾರ್ಯವನ್ನು ಮಾಡುತ್ತ ಬಂದಿದ್ದು, ಈ ಸಲವೂ ಸಪ್ಟೆಂಬರ್ 16 ರಂದು ಜರುಗುವ ಜಾತ್ರೆಯ ಸಂದರ್ಭದಲ್ಲಿ ಭಕ್ತರಿಗೆ ರೊಟ್ಟಿ ಪ್ರಸಾದ ವಿತರಣೆಯನ್ನು ಮಾಡಲಾಗುವುದು. ಭಕ್ತರು ಸಾವಿರಾರು ಸಂಖ್ಯೆಯಲ್ಲಿ ರೊಟ್ಟಿಯನ್ನು ನೀಡುತ್ತಿದ್ದಾರೆ ಎಂದು ಪ್ರಸಾದ ಸೇವಾ ಸಮಿತಿಯ ಬ್ರಿಜ್ಮೋಹನ ಚಿಂಡಕ ತಿಳಿಸಿದರು.

ಅವರು ಸೋಮವಾರ ಸ್ಥಳೀಯ ಕಾಡಸಿದ್ಧೇಶ್ವರ ದೇವಸ್ಥಾನದಲ್ಲಿ ಭಕ್ತರು ನೀಡಿದ ರೊಟ್ಟಿಯನ್ನು ಸ್ವೀಕರಿಸಿ ಮಾತನಾಡಿದರು.

ಮುಂದಿನ ದಿನಗಳಲ್ಲಿ ರಬಕವಿ ಬನಹಟ್ಟಿ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮೀಣ ಭಾಗದ ಜನರು ರೊಟ್ಟಿಯನ್ನು ನೀಡಲು ಮುಂದಾಗಿದ್ದಾರೆ ಎಂದು ಚಿಂಡಕ ತಿಳಿಸಿದರು.

ಪ್ರಸಾದ ಸೇವಾ ಸಮಿತಿಯ ಮತ್ತೋರ್ವ ಮುಖಂಡ ಗಿರೀಶ ಕಾಡದೇವರ ಮಾತನಾಡಿ, ಜಾತ್ರೆಯ ಮೂರು ದಿನಗಳಂದು ದೇವಸ್ಥಾನದ ಆವರಣದಲ್ಲಿ ಪ್ರತಿದಿನ ಮಧ್ಯಾಹ್ನ ಹದಿನೈದು ಸಾವಿರಕ್ಕಿಂತ ಹೆಚ್ಚು ಜನರಿಗೆ ಹುಗ್ಗಿ ಮತ್ತು ಕಿಚಡಿ ಪ್ರಸಾದದ ವಿತರಣೆಯನ್ನು ಮಾಡಲಾಗುವುದು. ಪ್ರಸಾದ ಸೇವೆಗೆ ಭಕ್ತರು ಕಾಣಿಕೆಯನ್ನು ಸಲ್ಲಿಸುತ್ತಿದ್ದಾರೆ ಎಂದರು.

ದುಂಡಯ್ಯಕಾಡದೇವರ,ನಿಜಗುಣಯ್ಯಕಾಡದೇವರ, ಶ್ರೀಶೈಲ ಅಥಣಿ, ಆನಂದ ಕಾಡದೇವರ, ಕಾಡಪ್ಪ ಬಾಬಾನಗರ, ಶ್ರೀಶೈಲ ಹೆಂಡಿ, ಶ್ರೀಶೈಲ ಕಾಡದೇವರ, ಶಿಖರೆಪ್ಪ ಮುಗತಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

ರಬಕವಿಯ ಭಾರತ ಗ್ಯಾಸ್ ಸೇವಾ ಸಮಿತಿ ಹಾಗೂ ಡಿ.ಕೆ. ಕೊಟ್ರಶೆಟ್ಟಿ ಫೌಂಡೇಶನ್ ವತಿಯಿಂದ ಒಂದು ಸಾವಿರ ರೊಟ್ಟಿಯನ್ನು ನೀಡಲಿದ್ದಾರೆ ಎಂದು ಶೇಖರ ದುಂಡಪ್ಪ ಕೊಟ್ರಶೆಟ್ಟಿ ತಿಳಿಸಿದ್ದಾರೆ.

# ರಾಜ್ಯದಲ್ಲಿ ಕುಸಿದು ಬಿದ್ದ ಕಾನೂನು ಸುವ್ಯವಸ್ಥೆ: ರಾಜ್ಯ ಸರಕಾರದ ಹಿಂದೂ ವಿರೋಧಿ ನೀತಿ ಖಂಡನೀಯ

## ಡಾ.ವೀರಣ್ಣ ಚರಂತಿಮಠ



**ಬಾಗಲಕೋಟೆ :** ಮದ್ದೂರು ಘಟನೆ ಸೇರಿದಂತೆ ರಾಜ್ಯದಲ್ಲಿ ಗಣೇಶ ವಿಸರ್ಜನೆ ವೇಳೆ ನಡೆದ ದುರ್ಘಟನೆಗಳನ್ನು ಗಮನಿಸಿದರೆ ಇದು ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ, ಇದು ಖಂಡನೀಯ ಎಂದು ಹಿಂದಿನ ಶಾಸಕರ ಡಾ.ವೀರಣ್ಣ ಚರಂತಿಮಠ ಅವರು ತಿಳಸಿದ್ದಾರೆ, ರಾಜ್ಯದಲ್ಲಿ ಹಿಂದೂಗಳ ಧಾರ್ಮಿಕ ಶ್ರದ್ಧಾ ಕೇಂದ್ರಗಳ ವಿರುದ್ಧದ ಅಪಪ್ರಚಾರದ ಷಡ್ಯಂತ್ರಗಳು, ಮದ್ದೂರು ಹಾಗೂ ರಾಜ್ಯದಲ್ಲಿ ಗಣೇಶ ವಿಸರ್ಜನೆ ವೇಳೆ ನಡೆಯುತ್ತಿರುವ ಘಟನೆಗಳನ್ನು ಗಮನಿಸಿದರೆ, ರಾಜ್ಯ ಸರಕಾರದ ಭದ್ರತಾ ವೈಫಲ್ಯ ಎದ್ದು ಕಾಣುತ್ತಿದೆ, ಕಾಂಗ್ರೆಸ್ಸ ಸರ್ಕಾರದ ಹಿಂದೂ ವಿರೋಧಿ, ತುಷ್ಟೀಕರಣನೀತಿಯಿಂದ ಹಿಂದೂಗಳ ಮೇಲೆ ದಬ್ಬಾಳಿಕೆ ನಡೆಯುತ್ತಿರುವುದು ಖಂಡನೀಯ. ಪೊಲೀಸ ಇಲಾಖೆಯನ್ನು ಸರ್ಕಾರ ನಿಶ್ಯಕ್ತಗೊಳಿಸಿದ್ದು, ರಾಜ್ಯದಲ್ಲಿ ಕಾನೂನು ಸವ್ಯವಸ್ಥೆ ಕುಸಿದಿದ್ದು ರಾಜ್ಯ ಸರ್ಕಾರದ ಪಾಪದ ಕೊಡ ತುಂಬಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸರಿಯಾಗಿ ನಡೆಯದ ತರಗತಿಗಳು

## ಅತಿಥಿ ಉಪನ್ಯಾಸಕರ ನೇಮಕಕ್ಕೆ ಒತ್ತಾಯ : ಡಾ.ಚಂದ್ರಶೇಖರ ಕಾಳನ್ನವರ



**ಬಾಗಲಕೋಟೆ :** ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿವೆ. ಅಲ್ಲಿ ಓದುವಲಕ್ಷಾಂತರವಿದ್ಯಾರ್ಥಿಗಳಿಗೆಕಳೇದ ಒಂದು ತಿಂಗಳಿಂದಲೂ ಯಾವುದೇ ಸರಿಯಾಗಿ ತರಗತಿಗಳ ನಡೆಯುತ್ತಿಲ್ಲ. ಅದಕ್ಕೆ ತಕ್ಷಣವೇ ಅತಿಥಿ ಉಪನ್ಯಾಸಕರ ನೇಮಕ ಮಾಡಿಕೊಳ್ಳಬೇಕೆಂದು ಅತಿಥಿ ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಅವರು ಬಾಗಲಕೋಟೆ ಜಿಲ್ಲಾ ಆಡಳಿತ ಭವನದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಅಶೋಕ ತೇಲಿ ಅವರ ಮೂಲಕ ಮುಖ್ಯಮಂತ್ರಿಗಳವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ರಾಜ್ಯದಲ್ಲಿ ಪ್ರಸಕ್ತ 2025–26 ನೇ ಶೈಕ್ಷಣಿಕ ವರ್ಷದ ಎಲ್ಲಾ ಪದವಿ ತರಗತಿಗಳು ಪ್ರಾರಂಭವಾಗಿ ತಿಂಗಳುಗಳೇ ಉರುಳಿದರೂ ಇತ್ತ ಉನ್ನತ ಶಿಕ್ಷಣ ಇಲಾಖೆಯು ಅತಿಥಿ ಉಪನ್ಯಾಸಕರ ನೇಮಕದ ಗೊಂದಲದಲ್ಲಿದೆ. ಇದು ಅತಿಥಿ ಉಪನ್ಯಾಸಕರಲ್ಲಿ ತುಂಬಾ ಬೇಸರ ತಂದಿದ್ದು, ಅಲ್ಲದೆ ರಾಜ್ಯದ ಬಹುತೇಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಅತಿಥಿ ಉಪನ್ಯಾಸಕರ ಬೋಧನೆ ಅವಲಂಭಿಸಿರುವುದು ಸರ್ಕಾರಕ್ಕೆ ಮೊದಲಿನಿಂದಲೂ ಗೊತ್ತಿದೆ. ಸದ್ಯ ತರಗತಿಗಳು ನಡೆಯದೇ ಇರುವುದರಿಂದ ಲಕ್ಷಾಂತರ ಪದವಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಹೆಚ್ಚುತ್ತಿದೆ. ಉನ್ನತ ಶಿಕ್ಷಣ ಇಲಾಖೆ ಹಾಗೂ ಅತಿಥಿ ಉಪನ್ಯಾಸಕರ ಮಧ್ಯದಲ್ಲಿರುವ ಜಲ್ವಂತ ಸಮಸ್ಯೆಗಳು ಕುರಿತು ಹಲವು ಪ್ರಕರಣಗಳು ಹೈಕೋರ್ಟ್‌ನಲ್ಲಿ ಇವೆ.

ಸರ್ಕಾರವು ಇವೆಲ್ಲವುಗಳನ್ನು ಗಮನಿಸಿ, ಈಗಾಗಲೇ ಉನ್ನತ ಶಿಕ್ಷಣ ಇಲಾಖೆಯು ಸರ್ಕಾರ ಮಟ್ಟದಲ್ಲಿ ಕಾನೂನು ಸಚಿವರ ಹಾಗೂ ಕಾನೂನು ತಜ್ಞರ ಸಭೆಯನ್ನು ಮಾಡಿದೆ. ಉನ್ನತ ಶಿಕ್ಷಣ ಇಲಾಖೆಯು ಇನ್ನೂ ಕಾಲಹರಣ ಮಾಡದೆ ಎಲ್ಲಾ ಅತಿಥಿ ಉಪನ್ಯಾಸಕರಿಗೆ ನ್ಯಾಯ ದೊರಕಿಸಿಕೊಡುವ ಗಟ್ಟಿ ನಿರ್ಧಾರ ಕೈಗೊಂಡು ಶೀಘ್ರವಾಗಿ ಅತಿಥಿ ಉಪನ್ಯಾಸಕರ ನೇಮಕ ಮಾಡಿಕೊಳ್ಳಬೇಕು ಮತ್ತು ಉನ್ನತ ಶಿಕ್ಷಣ ಇಲಾಖೆ ಹಂತದಲ್ಲಿಯೇ ನಕಲಿ ಪ್ರಮಾಣ ಪತ್ರಗಳ ಕುರಿತು ಪರಿಶೀಲನೆ ಘಟಕ ಮಾಡಬೇಕು. ನಕಲಿ ಪ್ರಮಾಣ ಪತ್ರಗಳನ್ನು ಪಡೆದು ಅತಿಥಿ ಉಪನ್ಯಾಸಕ ಹುದ್ದೆಯನ್ನು ಪಡೆಯುವ ಆತುರದಲ್ಲಿರುವವರ ವಿರುದ್ಧ ಸೂಕ್ತ ಕಠಿಣ ಕಾನೂನು ಕ್ರಮ ಜರುಗಿಸಬೇಕು.

ಮನವಿ ನೀಡುವ ಸಂದರ್ಭದಲ್ಲಿ ಅತಿಥಿ ಉಪನ್ಯಸಕರಾದ ಪ್ರೊ.ಸಂಗಮೇಶ ಬ್ಯಾಳಿ, ಪ್ರೊ.ದೇವೇಂದ್ರ ನಾಯಕ, ಪ್ರೊ.ಪುಂಡಲಿಕ ಹೊನ್ನಳ್ಳಿ, ಡಾ.ಸಂತೋಷ ಎಂ.ಕೆ ಅವರು ಶೀಘ್ರವಾಗಿ ಅತಿಥಿ ಉಪನ್ಯಾಸಕರ ನೇಮಕ ಮಾಡುವಂತೆ ಮನವಿ ಸಲ್ಲಿಸಿದರು.

# ಆರೋಗ್ಯಕರ ಸಮಾಜ ನಿರ್ಮಾಣ ಹೆಗ್ಗಡೆಯವರ ಗುರಿ



**ಬನಹಟ್ಟಿ :** ಸುಸಜ್ಜಿತವಾದ ಸ್ವಾಸ್ಥ್ಯ ಸಮಾಜ ನಿರ್ಮಾಣ ಹಾಗೂ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳ ಅಭಿವೃದ್ಧಿ ಮಾಡುವುದೆ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಮುಖ್ಯ ಗುರಿಯಾಗಿದೆ. ಆದ್ದರಿಂದ ನಾವೆಲ್ಲರೂ ವೀರೇಂದ್ರ ಹೆಗ್ಗಡೆಯವರನ್ನು ಬೆಂಬಲಿಸಬೇಕು ಎಂದು ನಗರದ ಸಾಮಾಜಿಕ ಕಾರ್ಯಕರ್ತ ಶಿವಾನಂದ ಗಾಯಕವಾಡ ತಿಳಿಸಿದರು.

ಅವರು ಇಲ್ಲಿನ ಹಳೆಯ ನೀರಿನ ಟ್ಯಾಂಕ್ ಹತ್ತಿರದ ಅಲ್ಲಮಪ್ರಭು ದೇವರ ಮಠದ ಭವನದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸುಜ್ಞಾನಿ ಶಿಷ್ಯ ನಿಧಿಯ ಪ್ರಮಾಣ ಪತ್ರಗಳನ್ನು ಮತ್ತು ಗಾಲಿ ಕುರ್ಚಿಗಳ ವಿತರಣೆಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧರ್ಮಸ್ಥಳದ ಗ್ರಾಮಾಭಿವೃದ್ಧಿ ಸಂಸ್ಥೆಯ ಬಾಗಲಕೋಟೆ ಜಿಲ್ಲಾ ಘಟಕದ ನಿರ್ದೇಶಕರಾದ ಚನ್ನಕೇಶವ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವು ನೀಡುವ ಸೌಲಭ್ಯಗಳನ್ನು ಬಳಸಿಕೊಂಡು ಉತ್ತಮ ವ್ಯಕ್ತಿಗಳಾಗಿ ಬದುಕಬೇಕು. ಯುವಕರು ದುಶ್ಚಟಗಳಿಗೆ ಬಲಿಯಾಗದೆ, ತಮ್ಮ ತಂದೆ ತಾಯಿಗಳಿಗೆ ಗೌರವ ತರುವ ಕಾರ್ಯವನ್ನು ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ. ಮಂಜುನಾಥ ಬೆನ್ನೂರ,ಜಮಖಂಡಿ ವಿಭಾಗದ ನಿರ್ದೇಶಕ ನಿಂಗಪ್ಪ ಗುಡಸಲಮನಿ ಮಾತನಾಡಿದರು.

ಅಲ್ಲಮಪ್ರಭು ದೇವರ ಮಠದ ಅಧ್ಯಕ್ಷ ಶ್ರೀಶೈಲ ಪಾನಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ 39 ಜನರಿಗೆ ಪ್ರಮಾಣ ಪತ್ರ ಮತ್ತು ಮೂವರಿಗೆ ಮೂರು ಗಾಲಿ ಕುರ್ಚಿಗಳನ್ನು ವಿತರಣೆ ಮಾಡಲಾಯಿತು.

ಶ್ರೀಶೈಲ ಧಬಾಡಿ, ಭೀಮಶಿ ಹೊರಗಿಮನಿ, ಪಂಡಿತಪ್ಪ ಚನಪನ್ನವರ, ಗೀತಾ ಬಾಬಾನಗರ,

ಬನಹಟ್ಟಿ ವಲಯದ ಮೇಲ್ವಿಚಾರಕ ಶಿವಾನಂದ ಎಂ.ವೈ. ಸೇವಾ ಪ್ರತಿನಿಧಿಗಳಾದ ಅನಿತಾ, ಪುಷ್ಪಾ, ಸುಧಾ, ಉಮಾಶ್ರೀ, ಗೀತಾ, ಪಾರ್ವತಿ, ಸುಮಾ, ಮೀನಾಕ್ಷಿ ಉಪಸ್ಥಿತರಿದ್ದರು.

# ಹಳಿಂಗಳಿ ಭದ್ರಗಿರಿಯಲ್ಲಿ ನೂತನ ಗೋ ಶಾಲೆ ಪ್ರಾರಂಭ

## ಗೋವುಗಳು ಭಾರತ ದೇಶದ ಪ್ರತೀತಿ–ಕುಲರತ್ನಭೂಷಣ ಮುನಿ



**ತೇರದಾಳ :** ಗೋವುಗಳೆಂದರೆ ಭಾರತ ದೇಶದ ಪ್ರತೀತಿಯಾಗಿವೆ. ಅವುಗಳ ಲಾಲನೆ ಪಾಲನೆ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಆದ್ದರಿಂದ ಹಳಿಂಗಳಿ ಭದ್ರಗಿರಿ ಬೆಟ್ಟದಲ್ಲಿ ಗೋಶಾಲೆ ಪ್ರಾರಂಭಿಸಲಾಗಿದೆ ಎಂದು 108 ಕುಲರತ್ನಭೂಷಣ ಮುನಿಗಳು ಹೇಳಿದರು.

ಅತ್ಯಂತ ಪ್ರಾಚೀನ ಧರ್ಮ ಎನಿಸಿಕೊಂಡಿರುವ ಜೈನ ಧರ್ಮದಲ್ಲಿ ಸಮಾಜಮುಖಿ ಕೆಲಸಗಳಿಗೆ ಹೆಚ್ಚಿನ ಮನ್ನಣೆ ನೀಡಲಾಗುತ್ತದೆ.

ಗೋಶಾಲೆ ಪ್ರಾರಂಭಿಸಬೇಕೆಂಬ ಬಹುದಿನಗಳ ಆಸೆ ಈಡೇರಿದಂತಾಗಿದೆ. ಇದಕ್ಕೆ ಬಹಳಷ್ಟು ಜನರ ಸಹಕಾರ ಇದೆ ಎಂದು ಹೇಳಿದರು. ದೆಹಲಿಯ ಉದ್ಯಮಿ ಮಾತನಾಡಿ, ಭದ್ರಗಿರಿಯಲ್ಲಿ ಗೋಶಾಲೆ ಪ್ರಾರಂಭಿಸಿರುವುದು ಇತರರಿಗೆ ಮಾದರಿಯಾಗಿದೆ. ಮುಂಬರುವ ದಿನಗಳಲ್ಲಿ ಹಂತ ಹಂತವಾಗಿ ಗೋಶಾಲೆ ಅಭಿವೃದ್ಧಿಗೆ ದೇಣಿಗೆ ನೀಡುವುದಾಗಿ ಅವರು ಭರವಸೆ ನೀಡಿದರು. ಕಾರ್ಯಕ್ರಮಕ್ಕೂ ಮೊದಲು ಗೋವುಗಳನ್ನು ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಮೂಲಕ ಕರೆತಂದು ಗೋಶಾಲೆಯನ್ನು ಉದ್ಘಾಟಿಸಲಾಯಿತು.

ಬೆಳಗಾವಿ ದಕ್ಷಿಣ ಮತಕ್ಷೇತ್ರದ ಮಾಜಿ ಶಾಸಕ ಸಂಜಯ ಪಾಟೀಲ ಮಾತನಾಡಿದರು.

ಹಳಿಂಗಳಿ, ತಮದಡ್ಡಿ, ತೇರದಾಳ ವಾಸವಿ ಪೂಜ್ಯ, ರಬಕವಿ, ಅಥಣಿ ತಾಲೂಕಿನ ಮಹಿಷವಾಡಗಿ ಸೇರಿದಂತೆ ಬೇರೆ ಬೇರೆ ಕಡೆಗಳಿಂದ ಜೈನ್ ಸಮಾಜದ ಜನಪ್ರತಿನಿಧಿಗಳು ಮುಖಂಡರು, ಶ್ರಾವಕ ಶ್ರಾವಕಿಯರು ಆಗಮಿಸಿದ್ದರು.

# ಶಿಕ್ಷಣದ ಜೊತೆ ಕ್ರೀಡೆಗೂ ಪ್ರೋತ್ಸಾಹ ನೀಡಿ–ಸವದಿ



**ರಬಕವಿ–ಬನಹಟ್ಟಿ :** ಯುವಕರು ಕ್ರೀಡಾಸಕ್ತಿ ಬೆಳೆಸಿಕೊಂಡು ದೈಹಿಕವಾಗಿ ಸದೃಢರಾಗಬೇಕು ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಅವರು ರಬಕವಿ–ಬನಹಟ್ಟಿ ತಾಲೂಕು ಪದವಿ ಪೂರ್ವ ಕಾಲೇಜುಗಳ 2025–26 ನೇ ಸಾಲಿನ ತಾಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡೆ ಅತ್ಯವಶ್ಯಕವಾಗಿದ್ದು,

ಕ್ರೀಡಾಧಿಕಾರಿಗಳು ಉತ್ತಮ ಕ್ರೀಡಾಪಟುಗಳನ್ನು ರೂಪಿಸಲು ಶ್ರಮಿಸಬೇಕು. ಕ್ರೀಡೆ ಮತ್ತು ಶಿಕ್ಷಣ ಒಂದೇ ನಾಣ್ಯದ ಎರಡು ಮುಖಗಳು.

ಶಿಕ್ಷಣದ ಜೊತೆ ಕ್ರೀಡೆಗೂ ಪ್ರೋತ್ಸಾಹ ನೀಡಬೇಕು.ಕ್ರೀಡೆಯಲ್ಲಿಸೋಲುಗೆಲುವನ್ನು ಸಮನಾಗಿ ನೋಡಿದಾಗ ನಾವೆಲ್ಲರೂ ಒಂದೇ ಎಂಬ ಭಾವನೆ ಬರುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಾಗಲಕೋಟೆ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಉಪನಿರ್ದೇಶಕ ಪುಂಡಲೀಕ ಎಸ್. ಕಾಂಬಳೆ ಮಾತನಾಡಿ,

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡೆಗಳು ಅವಶ್ಯಕ. ಪಾಠದೊಂದಿಗೆ ಆಟೋಟಗಳಲ್ಲಿ ಮಕ್ಕಳು ಭಾಗವಹಿಸಬೇಕು ಎಂದು ಹೇಳಿದರು.

ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಗೋವಿಂದ ಡಾಗಾ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ರಬಕವಿ–ಬನಹಟ್ಟಿ ತಾಲೂಕು ಕ್ರೀಡಾ ಸಂಯೋಜಕರಾದ ಎಂ. ಕೆ. ಮುರಗೋಡ ಪ್ರತಿಜ್ಞಾ ವಿಧಿ ಬೋಧಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಪ್ರಭಾರಿ ಪ್ರಾಚಾರ್ಯೆ ಚಂದ್ರಪ್ರಭಾ ಬಾಗಲಕೋಟ ವಹಿಸಿದ್ದರು.

ಅತಿಥಿಗಳಾಗಿ ಪ್ರಾಚಾರ್ಯರಾದ ಬಿ. ಆರ್. ಗೊಡ್ಡಾಳೆ, ಶರತ್ಚಂದ್ರ ಎ. ಜಂಬಗಿ, ಬಿ. ಎಸ್. ಕಾಂಬಳೆ, ವಿ. ಎಲ್. ನಾರಾಯಣಕರ ವೇದಿಕೆಯ ಮೇಲೆ ಆಸೀನರಾಗಿದ್ದರು.

ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಪಂಚಾಕ್ಷರಿ ನಂದೇಶ,

ಬಿ.ಇ.ಎಸ್. ಹೂಗಾರ, ಸಂಗಮೇಶ ಮೂರ್ಕರ್ತಿಹಾಳ, ಪಿ. ಎಸ್. ಸಿಂಗರೆಡ್ಡಿ, ಜಿ. ಎಸ್. ಜನವಾಡ, ಬಿ. ಜಿ. ಜೋರಾಪೂರ ಹಾಗೂ ತಾಲ್ಲೂಕಿನ ವಿವಿಧ ಶಾಲಾ ಕಾಲೇಜುಗಳ ದೈಹಿಕ ಶಿಕ್ಷಣ ಶಿಕ್ಷಕರನ್ನು ಸನ್ಮಾನಿಸಲಾಯಿತು.

# ಉಪ ಮುಖ್ಯಮಂತ್ರಿ ಶಿವಕುಮಾರ ಹೇಳಿಕೆಯ ಖಂಡನೆ



**ರಬಕವಿ–ಬನಹಟ್ಟಿ:** ಇತ್ತೀಚೆಗೆ ಆಲಮಟ್ಟಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯದ ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ಅವರು ವಕೀಲರು ರೈತರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎಂದು ಹೇಳುವುದರ ಮೂಲಕ ವಕೀಲರ ಗೌರವಕ್ಕೆ ಧಕ್ಕೆಯನ್ನುಂಟು ಮಾಡಿದ್ದಾರೆ. ಈ ಹೇಳಿಕೆಯನ್ನು ರಬಕವಿ ಬನಹಟ್ಟಿ ವಕೀಲರ ಸಂಘದ ಸದಸ್ಯರು ತೀವ್ರವಾಗಿ ಖಂಡಿಸುತ್ತಾರೆ ಎಂದು ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ ತಿಳಿಸಿದರು.

ಅವರು ಬುಧವಾರ ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಆದ್ದರಿಂದ ಡಿ. ಕೆ. ಶಿವಕುಮಾರ ರಾಜ್ಯದ ವಕೀಲರ ಕ್ಷಮೆಯಾಚಿಸಬೇಕು. ಈ ಕುರಿತು ರಾಜ್ಯಪಾಲರಿಗೆ ಮನವಿಯನ್ನು ಸಲ್ಲಿಸಿದ್ದು, ರಾಜ್ಯಪಾಲರು ಕೂಡಾ ಅವರ ಮೇಲೆ ಯೋಗ್ಯ ಕ್ರಮ ಕೈಗೊಳ್ಳಬೇಕು ಎಂದು ಕುಲಕರ್ಣಿ ತಿಳಿಸಿದರು.

ಈ ಸಂದರ್ಭದಲ್ಲಿ ವಕೀಲರು ನ್ಯಾಯಾಲಯದಿಂದ ತಹಶೀಲ್ದಾರ್ ಕಾರ್ಯಾಲಯದವರೆಗೆ ಪಾದಯಾತ್ರೆಯ ಮೂಲಕ ತೆರಳಿದರು.

ಕೆ. ಡಿ. ತುಬಚಿ,

ಸುರೇಶ ವಿ.ಗೊಳಸಂಗಿ, ರಾಜು ಫಕೀರಪೂರ, ವಿನೋದ ಪತ್ತಾರ, ಜಿ. ಎಸ್. ಅಮ್ಮಣಗಿಮಠ, ರವೀಂದ್ರ ಸಂಪಗಾಂವಿ, ಬಾಲಚಂದ್ರ ಕಾರ್ವೆಕರ, ಎಸ್. ಕೆ. ಸಲಬನ್ನವರ,

ಬಿ. ಎನ್. ಗುರವ, ರಮೇಶ ಎಕ್ಸಂಬಿ, ಚನ್ನು ಮಾಲಾಪುರ, ಮುಕುಂದ ಕೋಪರ್ಡೆ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಐದು ವರ್ಷದ ಮಗುವಿಗೆ ಯಕೃತ್ತು ಸಮಸ್ಯೆ: 'ಬಿಲೆರಿಯಾ ಅಟ್ರೆಸಿಯಾ' ಕಾಯಿಲೆ– ನೆರವಿಗೆ ಮೊರೆ



**ಬನಹಟ್ಟಿ :** ನವಜಾತ ಶಿಶುವಿದ್ದಾಗಲೇ ನಿರ್ವಿಷಿಕರಣವಲ್ಲದೇ ಸಣ್ಣ ಕರುಳಿನಲ್ಲಿ ನಡೆಯುವ ಜೀರ್ಣ ಕ್ರಿಯೆಗೆ ಬೇಕಾದ ರಸಗಳನ್ನು ಬಿಡುಗಡೆ ಮಾಡುವ ಮಹತ್ವದ ಕಾರ್ಯ ಯಕೃತ್ತಿನದ್ದು ಇರುತ್ತದೆ. ಇದಕ್ಕೂ ಮುಂದುವರೆದು ಅಪರೂಪದ ಕಾಯಿಲೆಯಾಗಿರುವ 'ಬಿಲೆರಿಯಾ ಅಟ್ರೆಸಿಯಾ' ಎಂಬ ಯಕೃತ್ತು ಕಾಯಿಲೆ ಕಾಣಿಸಿಕೊಂಡು ಕಳೆದ ಐದು ವರ್ಷಗಳಿಂದ ಆಕೆಗೆ ಚಿಕಿತ್ಸೆ ನಡೆಯುತ್ತಿದೆ.

ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲೂಕಿನ ಬನಹಟ್ಟಿಯ ಬಡ ನೇಕಾರ ಕುಟುಂಬದ ಪ್ರಶಾಂತ ಹಾಗು ಗೀತಾ ಜಾಡಗೌಡರ ಪುತ್ರಿ ಐದು ವರ್ಷದ ಸಮನ್ವಿತಾ ಎಂಬ ಬಾಲಕಿ ಈ ಕಾಯಿಲೆಯಿಂದ ಬಳಲುತ್ತಿದ್ದಾಳೆ.

ಚಿಕಿತ್ಸೆಗೆ ಸಂಬಂಧಿಸಿ ಕಳೆದ ಐದು ವರ್ಷಗಳಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯುತ್ತಿದೆ.

ಪ್ರತಿ ಎರಡು ತಿಂಗಳಿಗೊಮ್ಮೆ ಅಂದಾಜು 30 ರಿಂದ 40 ಸಾವಿರ ರೂ. ಗಳ ವೆಚ್ಚ ಸಾಮಾನ್ಯವಾಗಿದೆ.

ಶಸ್ತ್ರಕ್ರಿಯೆ ಅನಿವಾರ್ಯ: ಇದೀಗ ವೈದ್ಯರು ಯಕೃತ್ತು ವರ್ಗಾವಣೆಯೊಂದಿಗೆ ಶಸ್ತ್ರ ಕ್ರಿಯೆ ಅನಿವಾರ್ಯವೆಂದು ತಿಳಿಸಿದ್ದು, ಮಗುವಿನ ತಾಯಿ ಗೀತಾ ತನ್ನ ಯಕೃತ್ತು ವರ್ಗಾವಣೆಗೆ ಒಪ್ಪಿಕೊಂಡಿರುವ ಕಾರಣ ಸುಮಾರು 25 ರಿಂದ 30 ಲಕ್ಷ ರೂ.ಗಳ ವೆಚ್ಚ ಶಸ್ತ್ರ ಚಿಕಿತ್ಸೆಗೆ ತಗುಲಲಿದೆ.

ನೇಕಾರಿಕೆಯಿಂದ ಬದುಕು ಕಟ್ಟಿಕೊಳ್ಳುವುದೇ ಸವಾಲಾಗಿರುವ ಕುಟುಂಬಕ್ಕೆ ಆಸ್ಪತ್ರೆ ಚಿಕಿತ್ಸೆಯ ವೆಚ್ಚದಿಂದಾಗಿ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಗಿದೆ.

ಚಿಕಿತ್ಸೆಗೆಂದು ಸಹಾಯ–ಸಹಕಾರ ನೀಡುವವರು, ಮಹಾ ದಾನಿಗಳು ಮೊಬೈಲ್ ಸಂಖ್ಯೆ 6363237255 ಸಂಪರ್ಕಿಸಬಹುದು.

ಬ್ಯಾಂಕ್ ಖಾತೆ ಹೆಸರು ಗೀತಾ ಇಂಚಗನೇರಿ, ಖಾತೆ ಸಂಖ್ಯೆ: 37944235823 (ಎಸ್ಬಿಐ–ಎನ್ 0004757 )

ಈ ಸಂಖ್ಯೆಗೆ ಆರ್ಥಿಕ ನೆರವು ನೀಡಬಹುದು ಹಾಗೂ ಒಂದು ಜೀವ ಉಳಿಸಿದ ಪುಣ್ಯ ಪಡೆಯಬೇಕು.

# ಆದರ್ಶ ಶಾಲೆಯ ವಿದ್ಯಾರ್ಥಿಗಳ ಕ್ರೀಡಾ ಸಾಧನೆ

**ಕುಕನೂರು :** ತಾಲ್ಲೂಕಿನ ಇಟಗಿ ಗ್ರಾಮದ ಆದರ್ಶ ಶಾಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ಈಚೆಗೆ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಸಾಧನೆಮಾಡಿ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಶಾಲೆಯ ವಿದ್ಯಾರ್ಥಿಗಳು ಥ್ರೋಬಾಲ್‌ನಲ್ಲಿ ಪ್ರಥಮ ಸ್ಥಾನ, ವಿದ್ಯಾರ್ಥಿನಿ ಅನಿತಾ 3,000 ಮೀಟರ್ ಓಟ ದ್ವಿತೀಯ, ಪ್ರತಿಕ್ಷ 800 ಮೀಟರ್ ಓಟ ದ್ವಿತೀಯ, ಸಂಗೀತಾ ಎಂ. 100 ಮೀಟರ್ ಓಟದಲ್ಲಿ ಪ್ರಥಮ, ಅನಿತಾ ಎಂ ಎತ್ತರ ಜಿಗಿತ ಸ್ಪರ್ಧೆಯಲ್ಲಿ ದ್ವಿತೀಯ, ಕೀರ್ತಿ ಕೊಳಜಿ ಬಲ್ಲೆ ಎಸೆತದಲ್ಲಿ ಪ್ರಥಮ, ಕೀರ್ತಿ ತೊಂಡಿಹಾಳ 100 ಮೀಟರ್ ಹರ್ಡಲ್ಸ್, ತ್ರಿವಿಧ ಜಿಗಿತದಲ್ಲಿ ದ್ವಿತೀಯ, ಜ್ಯೋತಿ ಮಡ್ಡಿಗುಂಡು ಎಸೆತದಲ್ಲಿ ದ್ವಿತೀಯ, ಭೂಮಿಕಾ ಜೆ.ಸಿ ಸರಪಳಿ ಎಸೆತದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.

ಚೇತನ್ ಹತ್ತಿಕಟಗಿ ಎಂಬ ವಿದ್ಯಾರ್ಥಿ ಉದ್ದ ಜಿಗಿತ, ತ್ರಿವಿಧ ಜಿಗಿತ, 100{0}10 ಹರ್ಡಲ್ಸ್‌ನಲ್ಲಿ ಪ್ರಥಮ ಸ್ಥಾನ ಪಡೆದು ಸಮಗ್ರ ವೀರಾಗ್ರಣಿ ಪಡೆದುಕೊಂಡಿದ್ದಾನೆ. 4{0}100 ರಿಲೇಯಲ್ಲಿ ಪ್ರಥಮ, ಸುಮನ್ ಗುಂಡು ಎಸೆತ, ಸರಪಳಿ ಎಸೆತದಲ್ಲಿ ಪ್ರಥಮ ಸ್ಥಾನ, ಶಿವಕುಮಾರ್ 100 ಮೀ ಓಟದಲ್ಲಿ ಪ್ರಥಮ, ಪ್ರದೀಪ್ 200 ಮೀಟರ್ ಓಟದಲ್ಲಿ ದ್ವಿತೀಯ, ಅಲ್ಲಾನ 5,000 ಮೀಟರ್ ವಾಕ್‌ನಲ್ಲಿ ಪ್ರಥಮ ಸ್ಥಾನ, ಮನೋಜ್ ಎತ್ತರ ಜಿಗಿತ ಪ್ರಥಮ ಸ್ಥಾನ, ಪ್ರದೀಪ್ ಕಾರಬಾರಿ 400 ಮೀಟರ್ ಹರ್ಡಲ್ಸ್ ನಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಪ್ರಾಥಮಿಕ ವಿಭಾಗದಲ್ಲಿ: ಬಾಲಕರ ಕಬಡ್ಡಿ ಪ್ರಥಮ ಸ್ಥಾನ,
ಬಾಲಕರ ಥ್ರೋಬಾಲ್ ಪ್ರಥಮ ಸ್ಥಾನ, ಬಾಲಕಿಯರ ಥ್ರೋಬಾಲ್ ಪ್ರಥಮ ಸ್ಥಾನ, ದಿಲೀಪ್ ಚಕ್ರ ಎಸೆತದಲ್ಲಿ ಪ್ರಥಮ, ವೀಣಾ ಉದ್ದ ಜಿಗಿತದಲ್ಲಿ ಪ್ರಥಮ, ಹರೀಶ್ ಹರ್ಡಲ್ಸ್ ನಲ್ಲಿ ಪ್ರಥಮ ಸ್ಥಾನಗಳಿಸಿದ್ದಾರೆ.

ಸಾಧನೆ ಮಾಡಿ ವಿದ್ಯಾರ್ಥಿಗಳು ಹಾಗೂ ತರಬೇತಿಗೈದ ದೈಹಿಕ ಶಿಕ್ಷಣ ಶಿಕ್ಷಕಿ ಬಸಮ್ಮ ಮೇಟಿ ಅವರಿಗೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು, ಸದಸ್ಯರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

# ಗರ್ಭಿಣಿಯಾದ ಬಾಲಕಿ: ಯುವಕನ ಬಂಧನ

**ಯಲಬುರ್ಗಾ :** ತಾಲ್ಲೂಕಿನ ಗ್ರಾಮವೊಂದರಪ್ರೌಢಶಾಲೆಯವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆದಿದ್ದರಿಂದ ಆಕೆ ಗರ್ಭಿಣಿಯಾಗಿದ್ದು, ಈ ಸಂಬಂಧ ಯುವಕನೊಬ್ಬನನ್ನು ಬಂಧಿಸಲಾಗಿದೆ.



ಮಗಳ ಮೇಲೆ ಅತ್ಯಾಚಾರ ನಡೆಸಿದ್ದರಿಂದ ಆಕೆ ಗರ್ಭಿಣಿಯಾಗಿದ್ದಾಳೆ ಎಂದು ಸಂತ್ರಸ್ತ ಬಾಲಕಿಯ ಪೋಷಕರು ಗೋಕಾಕ ತಾಲ್ಲೂಕಿನ ನಾಗನೂರು ಗ್ರಾಮದ ಯುವನ್ ತಳಗಡೆ (19) ವಿರುದ್ಧ ದೂರು ನೀಡಿದ್ದರು. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಯುವಕನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಯಲಬುರ್ಗಾ ಠಾಣೆಯ ಸಿಪಿಐ ಮೌನೇಶಗೌಡ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಜಾಗೃತಿ ಮೂಡಿಸಲು ಕ್ರಮ: 'ಬಾಲ್ಯವಿವಾಹ ಮತ್ತು ಬಾಲಗರ್ಭಿಣಿಯರ ಸಂಖ್ಯೆ ಹೆಚ್ಚುತ್ತಿರುವುದು ಸವಾಲಾಗಿದೆ. ಪ್ರೀತಿಪ್ರೇಮದ ಹೆಸರಿನಲ್ಲಿ ಮಕ್ಕಳು ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿರುವುದು ಬೇಸರದ ಸಂಗತಿ. ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆಗಳಲ್ಲಿ ಈ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು ಅಗತ್ಯವಿದ್ದು, ಸಂಬಂಧಪಟ್ಟವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ' ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಪ್ರತಿಕ್ರಿಯಿಸಿದ್ದಾರೆ.

# ಗ್ರಾಮಸ್ಥರಿಂದಲೇ ರಸ್ತೆ ನಿರ್ಮಾಣ

**ಕೊಪ್ಪಳ :** ತಾಲ್ಲೂಕಿನ ಮುದ್ಲಾಪುರ ಗ್ರಾಮದಿಂದ ಕಿನ್ನಾಳ ಮತ್ತು ಕೊಪ್ಪಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಸಂಪೂರ್ಣವಾಗಿಹಾಳಾಗಿದ್ದು,ಗ್ರಾಮಸ್ಥರೇ ಹಣ ಸಂಗ್ರಹಿಸಿ ರಸ್ತೆ ನಿರ್ಮಿಸಿದ್ದಾರೆ.

ತಾಲ್ಲೂಕಿನ ಮುದ್ಲಾಪುರವು ಗಂಗಾವತಿ ಕ್ಷೇತ್ರಕ್ಕೆ ಒಳಪಡುತ್ತದೆ. ಹಾಗಾಗಿ ಗಂಗಾವತಿ ಮತ್ತು ಕೊಪ್ಪಳ ಶಾಸಕರಿಗೆ ಹಾಗೂ ವಿವಿಧ ಜನಪ್ರತಿನಿಧಿಗಳಿಗೆ ಬಹಳಷ್ಟು ಬಾರಿ ರಸ್ತೆ ನಿರ್ಮಾಣ ಮಾಡುವಂತೆ ಮನವಿ ಸಲ್ಲಿಸಲಾಗಿದೆ.



ಆದರೆ ಯಾವುದೇ ಪ್ರಯೋಜನವಾಗಿಲ್ಲ. ತಾಲ್ಲೂಕಿನ ಮುದ್ಲಾಪುರದಿಂದ ಕಿನ್ನಾಳ ಗ್ರಾಮಕ್ಕೆ 3 ಕಿಲೋ ಮೀಟರ್ ರಸ್ತೆ ಇದೆ. ಈ ರಸ್ತೆಯ ಮೂಲಕ ಮಕ್ಕಳು, ವೃದ್ಧರು, ಗರ್ಭಿಣಿಯರು, ರೋಗಿಗಳು ಸಂಚಾರ ಮಾಡುತ್ತಿದ್ದು, ರಸ್ತೆಯು ಗುಂಡಿಗಳಿಂದಲೇ ಆವೃತವಾಗಿದೆ. ಇದರಿಂದ ನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ.

ಆದರೆ ಮುದ್ಲಾಪುರ ಗ್ರಾಮಸ್ಥರು ತಾವೇ ರಸ್ತೆ ನಿರ್ಮಾಣ ಮಾಡಿಕೊಳ್ಳಲು ನಿರ್ಧರಿಸಿ, ಕಾರ್ಯಪ್ರವೃತ್ತರಾಗಿದ್ದಾರೆ. ಗ್ರಾಮಸ್ಥರೆಲ್ಲರೂ ಹಣ ಹಾಕಿದ್ದಾರೆ. ರಸ್ತೆ ನಿರ್ಮಾಣಕ್ಕೆ ಗ್ರಾಮಸ್ಥರೇ ಉಚಿತವಾಗಿ ಇಟಾಚಿ, ಜೆಸಿಬಿ ಮತ್ತು ಟ್ರ್ಯಾಕ್ಟರ್‌ಗಳನ್ನು ಬಳಕೆ ಮಾಡಿಕೊಂಡಿದ್ದಾರೆ.

ಮುದ್ಲಾಪುರ ಗ್ರಾಮವು ಹಿರೇಹಳ್ಳ ಯೋಜನೆ ವ್ಯಾಪ್ತಿಯಲ್ಲಿದ್ದು, ಜಲಾಶಯಕ್ಕೆ ತೊಂದರೆಯಾದರೆ ಇದೇ ರಸ್ತೆಯ ಮೂಲಕವೇ ಹೋಗಬೇಕು. ಗ್ರಾಮಸ್ಥರೆಲ್ಲರೂ ಹಣ ಸಂಗ್ರಹಿಸಿ, ರಸ್ತೆ ಕಾಮಗಾರಿ ಮಾಡಲಾಗಿದೆ ಎಂದು ಗ್ರಾಮಸ್ಥ ವಿರುಪಾಕ್ಷಪ್ಪ ಬಾರಕೇರ್ ಹೇಳಿದರು.

# ವರ್ಷ ಕಳೆಯುವುದರಲ್ಲಿಯೇ ರಸ್ತೆ ಹಾಳು

**ಅಳವಂಡಿ :** ಕೊಪ್ಪಳ ತಾಲ್ಲೂಕಿನ ಕವಲೂರು ಗ್ರಾಮದಿಂದ ಮುರ್ಲಾಪುರ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ವರ್ಷ ಕಳೆಯುವುದರಲ್ಲಿ ಎಲ್ಲೆಂದರಲ್ಲಿ ಅಲ್ಲಿ ಕಿತ್ತು ಹೋಗುತ್ತಿದ್ದು, ಸಂಚಾರಕ್ಕೆ ತೊಂದರೆಯಾಗುತ್ತಿದೆ.



ಕೊಪ್ಪಳ ಲೋಕೋಪಯೋಗಿ ಇಲಾಖೆಯ ಅನುದಾನದಲ್ಲಿ ಎಂಟು ತಿಂಗಳ ಹಿಂದೆಯಷ್ಟೇ ನಿರ್ಮಾಣಗೊಂಡಿರುವ ಕವಲೂರುದಿಂದ ಮುರ್ಲಾಪುರ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ 3 ಕಿ.ಮೀ ರಸ್ತೆ ಸಂಪೂರ್ಣ ಹಾಳಾಗುತ್ತಿದೆ. ಗ್ರಾಮೀಣ ಪ್ರದೇಶದ ರಸ್ತೆ ಸುಧಾರಣೆಗೆ ಸರ್ಕಾರ ಕೋಟಿಗಟ್ಟಲೆ ಅನುದಾನ ನೀಡಿದರೂ, ಗುತ್ತಿಗೆದಾರರ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಕಾಮಗಾರಿಗಳು ಸಮರ್ಪಕವಾಗಿ ಅನುಷ್ಠಾನ ಗೊಳ್ಳುತ್ತಿಲ್ಲ. ಡಾಂಬರೀಕರಣ ಕಾಮಗಾರಿ ಮುಗಿದ ಕೆಲವೇ ತಿಂಗಳಲ್ಲಿ ರಸ್ತೆಗಳು ಕಿತ್ತು ಹೋಗುತ್ತಿರುವುದು ಗುಣಮಟ್ಟದ ಕುರಿತು ಅನುಮಾನ ಮೂಡುವಂತೆ ಮಾಡಿದೆ.

ಕವಲೂರು ಗ್ರಾಮಸ್ಥರು ಹಾಗೂ ವಿವಿಧ ಸಂಘಗಳು ರಸ್ತೆ ನಿರ್ಮಾಣ ಮಾಡುವಂತೆ ಆಗ್ರಹಿಸಿ ಬೃಹತ್ ಪ್ರತಿಭಟನೆ ಮಾಡಿದ್ದರು.

ಇದನ್ನು ಮನಗಂಡ ಶಾಸಕರು ಹಾಗೂ ಅಧಿಕಾರಿಗಳು ರಸ್ತೆ ಅಭಿವೃದ್ಧಿಗೆ ಮುಂದಾಗಿದ್ದರು.

ಇದನ್ನು ಕಂಡು ಸಾರ್ವಜನಿಕರು ಹರ್ಷವನ್ನು ವ್ಯಕ್ತಪಡಿಸಿದ್ದರು.

ಆದರೆ ಇದೀಗ ಕವಲೂರುಮುರ್ಲಾಪುರ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಡಾಂಬರೀಕರಣ ಮಾಡಿದ ರಸ್ತೆಯ ಬಹುತೇಕ ಕಡೆಯಲ್ಲಿ ಡಾಂಬರು ಕಿತ್ತು ಬರುತ್ತಿದ್ದು ಕಳಪೆ ಕಾಮಗಾರಿಗೆ ಸಾಕ್ಷಿಯಾಗಿದೆ.

ಕೋಟಿಗಟ್ಟಲೆ ಅನುದಾನದಲ್ಲಿ ಗುಣಮಟ್ಟದ ಕೆಲಸ ಮಾಡಿದರೆ ವರ್ಷಗಳ ಕಾಲ ರಸ್ತೆ ಗಟ್ಟಿಮುಟ್ಟಾಗಿರಬೇಕು.

ಆದರೆ ವರ್ಷ ಕಳೆಯುವುದರೊಳಗೆ ಅವಧಿಯಲ್ಲಿ ಹಾಳಾಗುತ್ತಿರುವುದು ಜನರು ಅಸಮಾಧಾನಕ್ಕೆ ಕಾರಣವಾಗಿದೆ.

ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಮೇಲಧಿಕಾರಿಗಳು,ಶಾಸಕರು,ಸಚಿವರುಗಮನಹರಿಸಿ ಗುತ್ತಿಗೆದಾರರ ಮತ್ತು ಲೋಕೋಪಯೋಗಿ ಇಲಾಖೆಯ ಎಇಇ, ಜೆಇ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಕಳಪೆ ಕಾಮಗಾರಿ ಸರಿಪಡಿಸಿ ಮರು ಡಾಂಬರೀಕರಣ ಮಾಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

**ಕರೆ ಸ್ವೀಕರಿಸಿದ ಎಇಇ**

ರಸ್ತೆಯ ಕಳಪೆ ಕಾಮಗಾರಿಯ ಕುರಿತು ಮಾಹಿತಿ ಪಡೆಯಲು ಕೊಪ್ಪಳ ಲೋಕೋಪಯೋಗಿ ಇಲಾಖೆ ಎಇಇ ವೆಂಕಟೇಶ ಅವರಿಗೆ ಹಲವಾರು ಬಾರಿ ಕರೆ ಮಾಡಿದರೂ ಸ್ವೀಕರಿಸಲಿಲ್ಲ.

ರಸ್ತೆ ಕಾಮಗಾರಿ ಪೂರ್ಣಗೊಂಡ ಕೆಲವೇ ತಿಂಗಳಲ್ಲಿ ಡಾಂಬರು ಕಿತ್ತು ಹೋಗುತ್ತಿರುವುದು ಜನರಲ್ಲಿ ಅಚ್ಚರಿ ಮೂಡಿಸಿದೆ.

ಗುತ್ತಿಗೆದಾರರ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕಾಮಗಾರಿ ಮಾಡುವ ವಿಚಾರದಲ್ಲಿ ತೋರಿದ ನಿರ್ಲಕ್ಷ್ಯದಿಂದ ಸರ್ಕಾರದ ಅನುದಾನ ಪೋಲಾದಂತಾಗಿದೆ.

# ಸಂತ ಸೇವಾಲಾಲ್ ಮಹಾರಾಜರ ಪೋಸ್ಟರ್ ಹರಿದು ವಿಕೃತಿ: ಕ್ರಮಕ್ಕೆ ಆಗ್ರಹ

**ಕುಕನೂರು :** ಪಟ್ಟಣದ 19ನೇ ವಾರ್ಡ್‌ನ ಗುದ್ನೆಪ್ಪನ ಮಠದ ವೃತ್ತದಲ್ಲಿ ಅಂಟಿಸಿದ್ದ ಸಂತ ಸೇವಾಲಾಲ್ ಮಹಾರಾಜರ ಪೋಸ್ಟರ್ ಸೋಮವಾರ ರಾತ್ರಿಯಲ್ಲಿ ಕೆಲ ಕಿಡಿಗೇಡಿಗಳು ಹರಿದು ಅವಮಾನಿಸಿದ್ದಾರೆ.

ಇದನ್ನು ಗಮನಿಸಿದ ಬಂಜಾರ ಸಮಾಜದ ಮುಖಂಡರು ನೂರಾರು ಜನ ಜಮಾಯಿಸಿದ್ದರು.

ಪರಿಸ್ಥಿತಿ ಗಂಭೀರತೆಯನ್ನು ಅರಿತ ಸಿಪಿಐ ಮೌನೇಶ್ ಪಾಟೀಲ ಭೇಟಿ ನೀಡಿ, ಸ್ಥಳ ಪರಿಶೀಲಿಸಿದ್ದಾರೆ. ಬಳಿಕ ಸಮಾಜದ ಮುಖಂಡರೊಂದಿಗೆ ಮಾತನಾಡಿ,'ಕೃತ್ಯವನ್ನು ವಿಕೃತ ಮನಸ್ಸುಳ್ಳವರು ಮಾಡಿದ್ದಾರೆ ಎಂದು ಗೊತ್ತಾಗುತ್ತಿದೆ. ಕಿಡಗೇಡಿಗಳನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಕೈಗೊಳ್ಳುತ್ತೇವೆ' ಎಂದು ತಿಳಿಸಿದರು.

ಮುಖಂಡ ಸುರೇಶ್ ಬಳೂಟಗಿ ಮಾತನಾಡಿ,'ತಪ್ಪಿತಸ್ಥರನ್ನು ಹುಡುಕಿ ತಕ್ಕ ಶಿಕ್ಷೆ ನೀಡಬೇಕು. ಇಲ್ಲವಾದರೆ ಬೃಹತ್ ಪ್ರತಿಭಟನೆಹಮ್ಮಿಕೊಳ್ಳಲಿದ್ದೇವೆ'ಎಂದರು. ಕುಕನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ತನಿಖೆಯನ್ನು ಆರಂಭಿಸಿದ್ದಾರೆ.

ಈವೇಳೆಮೇಘರಾಜ್‌ಬಳಗೇರಿ,ಹಂಪಣ್ಣ ಕಟ್ಟಿಮನಿ, ಕುಮಾರ್ ಬಳಗೇರಿ, ಜಿತು ನಾಯಕ್, ಯಮನೂರ ಭಾನಪೂರ್, ಪ್ರಕಾಶ್ ಬಳಗೇರಿ, ಮಹೇಶ್ ಕಾರಭಾರಿ, ತಿರುಪತಿ ತಲ್ಲೂರು, ಕಿರಣ್ ರಾಥೋಡ್, ನಾಗರಾಜ್ ಭಾನಾಪುರ್, ಸೋಮಪ್ಪ ಚಿಕೇನಕೊಪ್ಪ, ಅರ್ಜುನ್ ಕಾರಭಾರಿ, ದುರ್ಗೇಶ್ ಕಟ್ಟಿಮನಿ, ಹನುಮಂತಪ್ಪ ಚವ್ಹಾಣ್ ಇದ್ದರು.



# ಕಿರಾಣಿ ಅಂಗಡಿ ಮೇಲೆ ಅಬಕಾರಿ ದಾಳಿ ಮಹಾರಾಷ್ಟ್ರದ ಮದ್ಯ ವಶ

**ಇಂಡಿ:**ಚಡಚಣತಾಲೂಕಿನರೇವತಗಾಂವಗ್ರಾಮದಿಂದ ನಂದೂರಗ್ರಾಮಕ್ಕೆಹೋಗುವರಸ್ತೆಯಹತ್ತಿರದಲ್ಲಿರುವ ಕಿರಾಣಿ ಅಂಗಡಿಯ ಮೇಲೆ ಅಬಕಾರಿ ದಾಳಿ ಮಾಡಿ ಒಟ್ಟು–2.52 ಲೀಟರ್ ಮಹಾರಾಷ್ಟದ ಮಧ್ಯ ವನ್ನು ಜಪ್ತಿ ಮಾಡಿ ವಶಪಡಿಸಿಕೊಂಡಿದ್ದಾರೆ. ಉಮೇಶ ಮಹಾದೇವ ಜಿಗಜೇವಣಿ ಸಾ–ರೇವತಗಾಂವ ತಾ–ಚಡಚಣ ಎಂಬುವರ ಮೇಲೆ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ರಾಹುಲ್ ಎಸ್ ನಾಯಕ ಅಬಕಾರಿ ನಿರಿಕ್ಷಕರು ಇಂಡಿ ವಲಯ ರವರ ನೇತೃತ್ವ ದಲ್ಲಿ ವಾದಿರಾಜ ಅಬಕಾರಿ ಉಪ ನಿರಿಕ್ಷಕರು ಇಂಡಿರವರು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ಸಿಬ್ಬಂದಿ ಗಳಾದ, ಅಶೋಕ ಎಸ್ ಗೋಣಸಗಿ, ಶಿವಾನಂದ ಕೊಡತೆ, ಲಾಳೆಮಶ್ಯಾಕ ಮಸಳಿ ದಾಳಿಯಲ್ಲಿ ಪಾಲಗೊಂಡಿದರು. ಎಂದು



ರಾಹುಲ್ ನಯಕ ಅಬಕಾರಿ ನಿರಿಕ್ಷಕರು ಇಂಡಿ ವಲಯ ಅವರು ತಿಳಿಸಿದ್ದಾರೆ.

# ಡಿಸಿಎಂ ಡಿಕೆಶಿ ವಿರುದ್ಧ ವಕೀಲರ ಪ್ರತಿಭಟನೆ




**ವಿಜಯಪುರ :** ಡಿಸಿಎಂ ಡಿ.ಕೆ. ಶಿವಕುಮಾರ ಅವರು ವಕೀಲರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದನ್ನು ಖಂಡಿಸಿ ವಿಜಯಪುರ ನಗರದ ಜಿಲ್ಲಾಧಿಕಾರಿ ಕಚೇರಿಯ ಎದುರು ಬಿಜಾಪುರ ಬಾರ್ ಅಸೋಸಿಯೇಷನ್ ನೇತೃತ್ವದಲ್ಲಿ ಮಂಗಳವಾರ ನ್ಯಾಯವಾದಿಗಳು ಪ್ರತಿಭಟನೆ ನಡೆಸಿದರು.

ಇತ್ತೀಚೆಗೆ ವಿಜಯಪುರ ಜಿಲ್ಲೆಯ ಆಲಮಟ್ಟಿಗೆ ಡಿಸಿಎಂ ಶಿವಕುಮಾರ ಭೇಟಿ ನೀಡಿದ ಸಂದರ್ಭದಲ್ಲಿ ವಕೀಲರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿದ ವಕೀಲರು ಕೋರ್ಟ್ ಕಲಾಪದಿಂದ ದೂರ ಉಳಿದು ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ನ್ಯಾಯವಾದಿಗಳು ಡಿಸಿಎಂ ಶಿವಕುಮಾರ್ ಅವರು ವಕೀಲರ ವಿರುದ್ಧ ಹೇಳಿಕೆ ನೀಡಿರುವುದು ವಕೀಲರಿಗೆ ಮಾಡಿದ ಅಪಮಾನವಾಗಿದೆ.ಅದಕ್ಕಾಗಿಕೋರ್ಟ್‌ಕಲಾಪದಿಂದ ದೂರು ಉಳಿದು ನ್ಯಾಯವಾದಿಗಳು ಜಿಲ್ಲಾಧಿಕಾರಿ ಕಚೇರಿ ಎದುರಿಗೆ ಪ್ರತಿಭಟನೆ ಮಾಡಿದರು. ಡಿಸಿಎಂ ಶಿವಕುಮಾರ ತಕ್ಷಣವೇ ವಕೀಲರಿಗೆ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಿರತ ವಕೀಲರು ಆಗ್ರಹಿಸಿದರು.

ಅನಂತರ ಜಿಲ್ಲಾಧಿಕಾರಿಗಳ ಮೂಲಕ ವಕೀಲರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

# ಪಿಪಿಪಿ ಮೆಡಿಕಲ್ ಕಾಲೇಜ್ ವಿರೋಧಿಸಿ ಬೃಹತ್ ಪ್ರತಿಭಟನೆ

**ವಿಜಯಪುರ :** ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆ ಕೈ ಬಿಟ್ಟು ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ವೈದ್ಯಕೀಯಕಾಲೇಜ್‌ಸ್ಥಾಪನೆಮಾಡುವಂತೆ ಒತ್ತಾಯಿಸಿ ಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ಹೋರಾಟ ಸಮಿತಿ ವತಿಯಿಂದ ಬೃಹತ್ ಹೋರಾಟ ನಡೆಯಿತು.



ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಗಾಂದಿಚೌಕ ಮಾರ್ಗವಾಗಿ ಸಾಗಿದ ರ‍್ಯಾಲಿಯಲ್ಲಿ ನೂರಾರು ವಿದ್ಯಾರ್ಥಿಗಳು 'ವಿಜಯಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜು ಬೇಕು, ಖಾಸಗಿ ಬೇಡವೇ ಬೇಡವೇ ಬೇಡ, ಪಿಪಿಪಿ ಮಾದರಿ ಕೈಬಿಡಿ?. ಎಂಬಿತ್ಯಾದಿ ಘೋಷಣೆ ಕೂಗಿದರು. ಡಾ.ಬಿ.ಆರ್. ಅಂಬೇಡ್ಕರ್ ಸರ್ಕಲ್‌ವರೆಗೂ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು.

ಹೋರಾಟಸಮಿತಿಸದಸ್ಯಬಿ.ಭಗವಾನ್‌ರೆಡ್ಡಿ ಮಾತನಾಡಿ, ಸರ್ಕಾರಿ ಆಸ್ಪತ್ರೆಗೆ ಸೂಕ್ತವಾದ ಸುಮಾರು149ಎಕರೆಗೂಹೆಚ್ಚುಸ್ಥಳಾವಕಾಶ ಸರಕಾರಿ ಆಸ್ಪತ್ರೆಯ ಆವರಣದಲ್ಲಿದೆ. ತಾಯಿ ಮತ್ತು ಮಕ್ಕಳ ವಿಶೇಷ ಆಸ್ಪತ್ರೆಯೂ ಇದೆ. ರಾಜ್ಯದ ಯಾವ ಜಿಲ್ಲೆಯಲ್ಲಿಯೂ ಇಲ್ಲ, ಸರ್ಕಾರ ಇದನ್ನು ಗುರುತಿಸಿ ಪಿಪಿಪಿ ಮಾದರಿಯನ್ನು ಯಾವ ಕಾರಣಕ್ಕೂ ವಿಜಯಪುರದಲ್ಲಿ ತರಲು ಬಿಡುವುದಿಲ್ಲ. ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟಕ್ಕೆ ಮುನ್ನಡೆಯಬೇಕಾಗುತ್ತದೆ ಎಂದು ಕರೆ ನೀಡಿದರು.

ಧುರೀಣಅಣ್ಣರಾಯಈಳಗೇರಮಾತನಾಡಿ, ಒಂದು ವೇಳೆ ಖಾಸಗಿ ಸಹಭಾಗಿತ್ವದಲ್ಲಿ ಕಾಲೇಜು ಆರಂಭವಾದರೆ ಅಲ್ಲಿ ಬಡ ಮತ್ತು ಮಧ್ಯಮ ವರ್ಗದ ಹಾಗು ಜನಸಾಮಾನ್ಯರ ಮಕ್ಕಳು ಕಲಿಯಲು ಸಾಧ್ಯವಾಗುವುದಿಲ್ಲ. ಮತ್ತು ಇದು ಮುಂದೆ ಕ್ರಮೇಣ ಸಂಪೂರ್ಣ ಖಾಸಗೀಕರಣಗೊಂಡು ಬಡವರ ಶಿಕ್ಷಣದ ಹಕ್ಕನ್ನು ಕಿತ್ತುಕೊಳ್ಳುತ್ತದೆಟಜಜಜಿಟಜಜ ನಾವೆಲ್ಲರೂ ಮುಂದಿನ ದಿನಗಳಲ್ಲಿ ಬೃಹತ್ ಹೋರಾಟಕ್ಕೆ ಮುನ್ನಡೆಯಬೇಕಾಗುತ್ತದೆ ಎಂದರು.

ಹಿರಿಯ ಸಾಹಿತಿ ಸುಭಾಷ್ ಯಾದವಾಡ ಮಾತನಾಡಿ, ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಬೇಕು ಎಲ್ಲಾ ಮಕ್ಕಳು ಕಡಿಮೆ ಹಣದಿಂದ ವೈದ್ಯಕೀಯ ಶಿಕ್ಷಣ ಪಡೆಯಬಹುದು ಆದ್ದರಿಂದ ನಾವೆಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡೋಣ ಎಂದರು.

ಅಕ್ರಮ ಮಾಷಳಕಾರ್, ಅನಿಲ ಹೊಸಮನಿ, ಅರವಿಂದ ಕುಲಕರ್ಣಿ, ಚಂದ್ರಶೇಖರ ಘಂಟೆಪ್ಪಗೋಳಫಾ.ಕೆವಿನ್‌ಮಲ್ಲಿಕಾರ್ಜುನ ಕೆಂಗನಾಳ, ಲಲಿತಾ ಬಿಜ್ಜರಗಿ, ಜಗದೇವ್ ಸುರ್ಯವಂಶಿ,ಶ್ರೀನಾಥ್ ಪೂಜಾರಿ, ಬೋಗೇಶ್ ಸೊಲಾಪುರ, ದಸ್ತಗಿರಿ ಉಕ್ಕಲಿ, ಶಿವಬಾಳಮ್ಮ ಕೊಂಡಗೂಳಿ, ಗೀತಾ ಹೆಚ್,ಕಾವೇರಿ ರಜಪೂತ, ಸಿದ್ದಲಿಂಗ ಬಾಗೇವಾಡಿ,ಮಹದೇವಿ ಧರ್ಮಶೆಟ್ಟಿ, ಶಶಿಕಲಾ ಮ್ಯಾಗೇರಿ, ಸುರೇಖಾ ರಜಪೂತ, ಅನುಸೂಯ ಕಾಂಬಳೆ, ಮಲ್ಲಿಕಾರ್ಜುನ ಬಟಗಿ, ಬಾಬುರಾವ್ ಬೀರಕಬ್ಬಿ, ಸಿದ್ರಾಮ ಹಿರೇಮಠ,ಶಿವಾನಂದ,,ಗಂಗಮ್ಮಉಳ್ಳಗಡ್ಡಿ, ,ಪ್ರಭುಗೌಡ ಪಾಟೀಲ,ಅಬ್ದುಲ ರೆಹಮಾನ್ ಬಿದರಕುಂದಿ, ಫಯಾಜ್ ಕಲಾದಗಿ,ಅಕ್ಷಯ ಅಜಮನಿ, ವಿ ಎ ನಾಗರತಾಣ, ಚಂದ್ರಶೇಖರ ಲಂಡಿ, ಮಲ್ಲಿಕಾರ್ಜುನ, ವೆಂಕಟೇಶ., ಸುರೇಶಬಿಜಾಪುರ,ಸಂಘರ್ಷಹೊಸಮನಿ, ಸಂಗಮೇಶ ಸಗರ, ಸಿದ್ದನಗೌಡ ಪಾಟೀಲ, ಲಕ್ಷ್ಮಣ ಕಂಬಾಗಿ, ರೆಹಮಾನ್,ವಾಸುದೇವ ಕಾಳೆ, ಜಬೀನಾ ಖಾನಂ ಉಪಸ್ಥಿತರಿದ್ದರು.

# ಅಂತರ ಕಾಲೇಜು ಮಹಿಳಾ ಹಾಗೂ ಪುರುಷರ ಶಟಲ್ ಬ್ಯಾಡ್ಮಿಂಟನ್ ಟೂರ್ನಾಮೆಂಟ್

**ವಿಜಯಪುರ :** ನಗರದ ಪ್ರತಿಷ್ಠಿತ ಬಿ ಎಲ್ ಡಿ ಇ ಸಂಸ್ಥೆಯ ಡಾ. ಫ. ಗು. ಹಳಕಟ್ಟಿ ತಾಂತ್ರಿಕ ಹಾಗೂ ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಲ್ಬುರ್ಗಿ ವಿಭಾಗದ ಅಂತರ ಕಾಲೇಜು ಮಹಿಳಾ ಹಾಗೂ ಪುರುಷರ 2025–26 ರ ಶಟಲ್ ಬ್ಯಾಡ್ಮಿಂಟನ್ ಟೂರ್ನಮೆಂಟ್ ಈಚೆಗೆ ಜರುಗಿತು.




ಪ್ರಾಚಾರ್ಯ ಡಾ. ಮಂಜುನಾಥ ಅವರು ಉದ್ಘಾಟಿಸಿ, ಕ್ರೀಡೆಗಳು ವಿದ್ಯಾರ್ಥಿಗಳಿಗೆ ದೈಹಿಕ ಸದೃಡ ಆರೋಗ್ಯವನ್ನು ಹೆಚ್ಚಿಸುವ ಮೂಲಕ ಮತ್ತು ಬೊಜ್ಜು ಕಡಿಮೆ ಮಾಡುವ ಮೂಲಕ, ಮನಸ್ಥಿತಿಯನ್ನು ಹೆಚ್ಚಿಸುವ ಮೂಲಕ ಮತ್ತು ಒತ್ತಡವನ್ನು ಕಡಿಮೆ ಮಾಡುವ ಮೂಲಕ ಮಾನಸಿಕ ಯೋಗಕ್ಷೇಮವನ್ನು ಹೆಚ್ಚಿಸುವ ಮೂಲಕ, ತಂಡದ ಕೆಲಸ ಮತ್ತು ಸಂವಹನದಂತಹ ಅಗತ್ಯಸಾಮಾಜಿಕ ಕೌಶಲ್ಯಗಳನ್ನು ಬೆಳೆಸುವ ಮೂಲಕ, ಶಿಸ್ತು ಮತ್ತು ಆತ್ಮ ವಿಶ್ವಾಸದಂತಹ ನಿರ್ಣಾಯಕ ಗುಣಲಕ್ಷಣಗಳನ್ನು ಅಭಿವೃದ್ಧಿಪಡಿಸುವ ಮೂಲಕ ಮತ್ತು ಗಮನ, ಸ್ಮರಣೆ ಮತ್ತು ಸಮಯ ನಿರ್ವಹಣೆಯನ್ನು ಸುಧಾರಿಸುವ ಮೂಲಕ ಶೈಕ್ಷಣಿಕ ಯಶಸ್ಸನ್ನು ಬೆಂಬಲಿಸುವ ಮೂಲಕ ಪ್ರಯೋಜನವನ್ನು ನೀಡುತ್ತವೆ.

ಈ ಚಟುವಟಿಕೆಗಳು ನಾಯಕತ್ವಕ್ಕೆ ಅವಕಾಶಗಳನ್ನು ಒದಗಿಸುತ್ತವೆ, ಭಾವನೆಗಳನ್ನು ನಿರ್ವಹಿಸುವಲ್ಲಿ ಮತ್ತು ಸೋಲನ್ನು ನಿಭಾಯಿಸುವಲ್ಲಿ ಅಮೂಲ್ಯವಾದ ಪಾಠಗಳನ್ನು ಕಲಿಸುತ್ತವೆ ಮತ್ತು ದೀರ್ಘಕಾಲೀನ ಆರೋಗ್ಯ ಮತ್ತು ವೃತ್ತಿ ಪ್ರಗತಿಗೆ ಕೊಡುಗೆ ನೀಡಬಹುದು ಎಂದು ಹೇಳಿದರು.

ಬಿ ಎಲ್ ಡಿ ಇ ಸಂಸ್ಥೆಯ ದೈಹಿಕ ನಿರ್ದೇಶಕ ಎಸ್. ಎಸ್. ಕೋರಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ, ಆಧುನಿಕ ಯುಗದಲ್ಲಿ ವಿದ್ಯಾರ್ಥಿಗಳು ಕ್ರೀಡಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಪಂದ್ಯಾವಳಿಯಲ್ಲಿ ಒಟ್ಟು ಪುರುಷರ 7 ತಂಡಗಳು ಹಾಗೂ ಮಹಿಳೆಯರ 6 ತಂಡಗಳು ಭಾಗವಹಿಸಿದ್ದವು.

ಪುರುಷರ ವಿಭಾಗದಲ್ಲಿ ಬಿ ಎಲ್ ಡಿ ಇ ಸಂಸ್ಥೆಯ ವಚನ ಪಿತಾಮಹ ಡಾ. ಫ. ಗು.ಹಳಕಟ್ಟಿ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಹಾಗೂ ಬಾಗಲಕೋಟೆಯ ಬಸವೇಶ್ವರ ತಾಂತ್ರಿಕ ವಿದ್ಯಾಲಯದ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಮಹಿಳಾ ವಿಭಾಗದಲ್ಲಿ ಬಳ್ಳಾರಿಯ ಬಿ ಐ ಟಿ ಎಂ ವಿದ್ಯಾರ್ಥಿನಿಯರು ಪ್ರಥಮ ಸ್ಥಾನ ಹಾಗೂ ಬಿ ಎಲ್ ಡಿ ಇ ವಿದ್ಯಾರ್ಥಿನಿಯರು ದ್ವಿತೀಯ ಸ್ಥಾನವನ್ನು ಅಲಂಕರಿಸಿಕೊಂಡಿದ್ದಾರೆ.

ಕೈಲಾಶ ಹಿರೇಮಠ, ಗಣೇಶ ಕೋರಿ, ಲಕ್ಷ್ಮಿಕಾಂತ, ಡಾ. ಶರಣಮ್ಮ ಕುಪ್ಪಿ, ಭಾರತಿ ಮಠಪತಿ, ಪ್ರಸಾದ, ಭಾಗ್ಯಶ್ರೀ ಪಾಟೀಲ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ದೈಹಿಕ ನಿರ್ದೇಶಕರು, ತೀರ್ಪುಗಾರರು ಉಪಸ್ಥಿತರಿದ್ದರು.

# ಭೂಮಿ ಪೂಜಾ ಸಮಾರಂಭ



**ಹೂವಿನ ಹಿಪ್ಪರಗಿ :** ಸಮೀಪದ ರಾಮನಹಟ್ಟಿ. ಗ್ರಾಮದಲ್ಲಿ ದೇವರ ಹಿಪ್ಪರಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಮನಹಟ್ಟಿ ಗ್ರಾಮದಲ್ಲಿ ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕರು ಶ್ರೀ ರಾಜುಗೌಡ ಪಾಟೀಲ್. ಕುದರಿ ಸಾಲವಾಡಗಿ ಇವರು ಅಮೃತ ಹಸ್ತದಿಂದ ಭೂಮಿಪೂಜಾಕಾರ್ಯಕ್ರಮವನ್ನುಮಾಡಲಾಯಿತು. ಕುದರಿ ಸಾಲವಾಡಗಿ ಯಿಂದ ರಾಮನಹಟ್ಟಿ ರಸ್ತೆ ಕಿ ಮೀ 0.00.ರಿಂದ 6.00 ಪ್ರಸ್ತಾಪಿತ ಕಿ ಮೀ 0.00 ರಿಂದ 3.13 ಅಭಿವೃದ್ಧಿ ಪಡಿಸುವುದು

ಅಂದಾಜು ಮೊತ್ತ.495.00 ಲಕ್ಷಗಳ ರೂಪಾಯಿ ಅನುದಾನವನ್ನು ಇರುತ್ತದೆ. ಈಗಾಗಲೇ ಗ್ರಾಮದ ಸರ್ಕಾರಿ ಶಾಲೆಗೆ. 5 ಲಕ್ಷವನ್ನು ರೂಪಾಯಿ ಶಾಲಾ ಅಭಿವೃದ್ಧಿಗೆಹಾಕಲಾಗಿದೆ.ಗ್ರಾಮದಲ್ಲಿ.ಮಹಿಳೆಯರಿಗೆ ಶೌಚಾಲಯ ಮತ್ತು ಸಿಸಿ ರೋಡ್ ಮುಖ್ಯರಸ್ತೆ. ವಿವಿಧ ಅಭಿವೃದ್ಧಿಗೋಸ್ಕರ ಒಟ್ಟು ಗ್ರಾಮದ ಅಭಿವೃದ್ಧಿಗೆ 10 ಕೋಟಿ ರೂಪಾಯಿ ಅನುದಾನವನ್ನು ಹಾಕಲಾಗಿದೆ ಎಂದು ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕರು ಶ್ರೀ ರಾಜುಗೌಡ ಪಾಟೀಲ್ ಹೇಳಿದರು. ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಐದು ಗ್ಯಾರೆಂಟಿಯ ಸಲುವಾಗಿ ಕ್ಷೇತ್ರದ ಅಭಿವೃದ್ಧಿಗೆ. ಅನುದಾನವನ್ನು ಕುಂಟಿತಗೊಂಡಿದೆ. ಗ್ರಾಮಸ್ಥರು ಮತ್ತು ಮತಕ್ಷೇತ್ರದ ಜನರು ನನಗೆ ನಿರೀಕ್ಷೆ ಮೀರಿ ಆಶೀರ್ವಾದ ಮಾಡಿದಿರಾ. ಅಭಿವೃದ್ಧಿ ವಿಷಯದಲ್ಲಿ ಸಹಕರಿಸಬೇಕು. ಗ್ರಾಮದಲ್ಲಿ ಅಭಿವೃದ್ಧಿ ಆಗಬೇಕು ಅಂದ್ರೆ ಗ್ರಾಮಸ್ಥರು ಸಹಕಾರ ಬಹಳ ಅವಶ್ಯಕತೆ ಇರುತ್ತದೆ ಎಂದು ಬಹಳ ಸ್ಪಷ್ಟವಾಗಿ ಹೇಳಿದರು.

ಈ ಸಂದರ್ಭದಲ್ಲಿ. ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕರು ರಾಜುಗೌಡ ಪಾಟೀಲ ಮತ್ತು ಇವರ ಸಹೋದರ ಸಚಿನಗೌಡ ಪಾಟೀಲ್. ಗುರುನಗೌಡ ಪಾಟೀಲ್ ಲೋಕೋಪ ಇಲಾಖೆಯ ಅಧಿಕಾರಿಗಳು ದೊಡ್ಡಮನಿ ಸರ್ ಮತ್ತು ಕಲಬುರ್ಗಿ ಸರ್.

ಗ್ರಾಮ ಪಂಚಾಯತಿ ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಸದಸ್ಯರು ಗ್ರಾಮದ ಪಕ್ಷದ ಮುಖಂಡರು ಹಿರಿಯರು. ಗ್ರಾಮಸ್ಥರು ಇನ್ನೂ ಅನೇಕ ಜನ ಉಪಸ್ಥಿತರಿದ್ದರು.

# ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಧಾರ್ಮಿಕ ಕಾಲಂನಲ್ಲಿ 'ಲಿಂಗಾಯತ' ಎಂದು ಬರೆಸುವ ಅವಕಾಶಕ್ಕಾಗಿ ಒತ್ತಾಯ

**ಜಮಖಂಡಿ:**ರಾಜ್ಯಸರ್ಕಾರಕೈಗೊಳ್ಳಲಿರುವ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಧಾರ್ಮಿಕ ಕಾಲಂನಲ್ಲಿ 'ಲಿಂಗಾಯತ' ಎಂದು ಬರೆಯಲು ಅವಕಾಶ ಮಾಡಿಕೊಡಲು ಒತ್ತಾಯಿಸಿ ಹಿಂದುಳಿದ ವರ್ಗಗಳ ಕಲ್ಯಾಣ ಆಯೋಗಕ್ಕೆ ಮನವಿ ಸಲ್ಲಿಸಲಾಯಿತು.

ಬಸವಕೇಂದ್ರ,ಬಸವಸಮಿತಿ,ವಚನಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಲಿಂಗಾಯತ ಮಹಾಸಭಾ ವತಿಯಿಂದ ಇಲ್ಲಿನ ಉಪವಿಭಾಗಾಧಿಕಾರಿಗಳ ಕಚೇರಿಯ

ಗ್ರೇಡ್–2 ತಹಶೀಲ್ದಾರ್ ಎನ್.ಜಿ. ಬಿರಡಿ ಅವರ ಮೂಲಕ ಮಂಗಳವಾರ ಸಲ್ಲಿಸಲಾದ ಮನವಿಯಲ್ಲಿ ಈ ಒತ್ತಾಯ ಮಾಡಲಾಗಿದೆ. ಒಂದು ವೇಳೆ ಧರ್ಮದ ಕಾಲಂನಲ್ಲಿ ಲಿಂಗಾಯತ ಬರೆಯಲು ಅವಕಾಶ ಇರದಿದ್ದರೆ ಧರ್ಮದ ಕಾಲಂನಲ್ಲಿ 'ಯಾವುದು ಇಲ್ಲ' ಎಂದು ನಮೂದಿಸಿ



ಜಾತಿ ಕಾಲಂನಲ್ಲಿ 'ಲಿಂಗಾಯತ' ಅಥವಾ 'ಲಿಂಗಾಯತದ ಜೊತೆಗೆ ಉಪಜಾತಿ'ಯನ್ನು ನಮೂದಿಸಲಾದರೂ ಅವಕಾಶ ಕೊಡಬೇಕು. ಯಾವುದೇ ಕಾರಣಕ್ಕೂ 'ಹಿಂದೂ ಅಥವಾ ಇತರೆ' ಎಂದು ಧರ್ಮದ ಕಾಲಂನಲ್ಲಿ ಲಿಂಗಾಯತರನ್ನು ಸೇರಿಸಬಾರದು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಆಯೋಗ ಗುರುತಿಸಿರುವ ಲಿಂಗಾಯತರ 78 ಜಾತಿ/ಉಪಜಾತಿಗಳ ಪೈಕಿ 13 ಉಪಜಾತಿಗಳು ಪುನರಾವರ್ತನೆಗೊಂಡಿವೆ. ಆದರೆ, ಆಯೋಗ ಇನ್ನೂ 48 ಉಪಜಾತಿಗಳನ್ನು ಗುರುತಿಸಿಲ್ಲ. ಕೇಂದ್ರ ಸರ್ಕಾರದ 2006ರ ಜಾತಿ ಸಂಹಿತೆ ಪ್ರಕಾರ 32 ಉಪಜಾತಿಗಳು, ಡಾ.ಬಾಬಾಸಾಹೇಬ ಅಂಬೇಡ್ಕರ್ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಪ್ರಕಾರ 8 ಉಪಜಾತಿಗಳು ಹಾಗೂ ಇತರೆ ಮಾಹಿತಿ ಪ್ರಕಾರ 23 ಉಪಜಾತಿಗಳು ಒಟ್ಟು ಸೇರಿ ಲಿಂಗಾಯತರ 111 ಉಪಜಾತಿಗಳನ್ನು ಗುರುತಿಸಿಲ್ಲ.

ಆಯೋಗಗುರುತಿಸಿರುವ78ಉಪಜಾತಿಗಳು ಹಾಗೂ ಗುರುತಿಸದೆ ಉಳಿದಿರುವ 111 ಉಪಜಾತಿಗಳು ಸೇರಿ ಲಿಂಗಾಯತರ ಒಟ್ಟು 189 ಜಾತಿ/ಉಪಜಾತಿಗಳನ್ನು ಪಟ್ಟಿ ಮಾಡಲು ಮನವಿ ಪತ್ರದಲ್ಲಿ ಆಯೋಗವನ್ನು ಒತ್ತಾಯಿಸಲಾಗಿದೆ.

ವಚನ ಸಾಹಿತ್ಯ ಪರಿಷತ್ತಿನ ಎಂ.ಡಿ. ಸಂಖ, ಬಸವ ಕೇಂದ್ರದ ಮಹಾಂತೇಶ ಅಂಗಡಿ, ಅಣ್ಣಾಸಾಹೇಬ ಜಗದೇವ, ಬಸವಜ್ಯೋತಿ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಪ್ರೊ.ಬಸವರಾಜ ಕಡ್ಡಿ, ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ, ಉಪನ್ಯಾಸಕ ಮೌನೇಶ ಬಡಿಗೇರ ಹಾಗೂ ಕರೆಪ್ಪ ಬೀಳಗಿ ಮನವಿ ಸಲ್ಲಿಸಿದ ನಿಯೋಗದಲ್ಲಿದ್ದರು.

# ಬಣಜಿಗ ಸಂಘದ ಸಭೆ

**ವಿಜಯಪುರ:** ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ (ರಿ) ಬೆಂಗಳೂರು ಸಂಘದ ರಾಜ್ಯ ಘಟಕದ ವತಿಯಿಂದ ರವಿವಾರ ನಗರದಲ್ಲಿ ಸಭೆ ನಡೆಯಿತು.

ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ರೊಡಗಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವಿಧ ಮಹತ್ವದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಸಭೆಯ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಜ್ಞಾನ ಯೋಗಾಶ್ರಮ ಶ್ರೀ ಬಸವಲಿಂಗ ಮಹಾಸ್ವಾಮೀಜಿ ಮಾತನಾಡಿ, ಸಮಾಜದ ಸಂಘಟನೆಗಳು ಸಾಮಾಜಿಕವಾಗಿ ನೊಂದವರ ಮನಗಳಿಗೆ ನಂದಾದೀಪವಾಗಿ ಕಾರ್ಯಮಾಡಬೇಕು ಎಂದು ತಿಳಿಸಿದರು. ವಿವಿಧ ಸಂಘ ಸಂಸ್ಥೆಗಳು ಶಿಕ್ಷಣ ನೀಡುವುದಲ್ಲದೆ ಮತ್ತು ಅನ್ನದಾಸೋಹ ವಿವಿಧ



ಸಾಮಾಜಿಕ ಕಾರ್ಯಗಳು ನಮ್ಮ ನಾಡಿನಲ್ಲಿ ಮಾಡುತ್ತಿರುತ್ತವೆ ಎಂದು ಆಶೀರ್ವಚನ ನೀಡಿದರು.

ಉಪಾಧ್ಯಕ್ಷ ಅಂದಪ್ಪ ಜವಳಿ ಸಂಘದ ಬೆಳವಣಿಗೆ ಅನೇಕ ವಿಚಾರಗಳನ್ನು ಮನವರಿಕೆ ಮಾಡಿಕೊಟ್ಟರು. ವಿವಿಧ ಸಂಘದ ಬದಲಾವಣೆಯ ವಿಚಾರಗಳನ್ನು ರಾಜ್ಯಾದ್ಯಂತ ಇರುವ ಜಿಲ್ಲೆ ಹಾಗೂ ತಾಲೂಕ ಅಧ್ಯಕ್ಷರು ಪದಾಧಿಕಾರಿಗಳು ಭಾಗವಹಿಸಿದ್ದರು.

# ಮನಗೂಳಿ ಪ.ಪಂ ಅಧ್ಯಕ್ಷ ಸೇರಿ ಮೂವರು ಜೆಡಿಎಸ್‌ಗೆ

**ಬಸವನಬಾಗೇವಾಡಿ :** ತಾಲ್ಲೂಕಿನ ಮನಗೂಳಿ ಪಟ್ಟಣ ಪಂಚಾಯಿತಿಯಲ್ಲಿ ಬಿಜೆಪಿ ಪಕ್ಷದಿಂದ ಚುನಾಯಿತರಾಗಿದ್ದ ಪ.ಪಂ ಹಾಲಿ ಅಧ್ಯಕ್ಷ ಡಾ.ಮಳಸಿದ್ದಪ್ಪ ಮೇತ್ರಿ ಹಾಗೂ ಸದಸ್ಯರಾದ ಪ್ರಕಾಶ ಮನಗೂಳಿ, ರಮೇಶ ಪಿರಗಾ ಮಂಗಳವಾರ ಸಂಜೆ ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ ಮನಗೂಳಿ ಅವರ ಸಮ್ಮುಖದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು.

ಮನಗೂಳಿ ಪ.ಪಂ ಅಧ್ಯಕ್ಷ ಡಾ.ಮಳಸಿದ್ದಪ್ಪ ಡಿ.ಮೇತ್ರಿ ವಿರುದ್ಧ ಆಡಳಿತ ಪಕ್ಷದ 9 ಸದಸ್ಯರು ಆ.26 ರಂದು ಅವಿಶ್ವಾಸ ಗೊತ್ತುವಳಿ ಅರ್ಜಿ ಸಲ್ಲಿಸಿದ್ದರು. ಸೆ.10 ರಂದು ಪ.ಪಂ ಅಧ್ಯಕ್ಷ ಸ್ಥಾನದ ಅವಿಶ್ವಾಸ ನಿರ್ಣಯ ಗೊತ್ತುವಳಿಗಾಗಿ ವಿಶೇಷ ಸಾಮಾನ್ಯ ಸಭೆ ನಿಗದಿಯಾಗಿರುವ ಹಿನ್ನೆಲೆ ನಡೆದ ದಿಢೀರ್



ರಾಜಕೀಯ ಬೆಳವಣಿಗೆಯಲ್ಲಿ ಮೂವರು ಸದಸ್ಯರು ಜೆಡಿಎಸ್‌ಗೆ ಸೇರ್ಪಡೆಗೊಂಡಿದ್ದಾರೆ.

ಸೇರ್ಪಡೆ ಬಳಿಕ ಪ.ಪಂ ಅಧ್ಯಕ್ಷ ಡಾ. ಮಳಸಿದ್ದಪ್ಪ ಮೇತ್ರಿ ಮಾತನಾಡಿ, 'ಪಟ್ಟಣದ ಅಭಿವೃದ್ಧಿ ವಿಚಾರವಿಟ್ಟುಕೊಂಡು ಸಚಿವ ಶಿವಾನಂದ ಪಾಟೀಲ ಅವರಿಗೆ ಬೆಂಬಲ ವ್ಯಕ್ತಪಡಿಸಿ, ಪಟ್ಟಣದ ಅಭಿವೃದ್ಧಿಗೆ ಶ್ರಮಿಸಿದ್ದೇವೆ. ಆದರೆ ಇತ್ತಿಚೀನ ರಾಜಕೀಯ ಬೆಳವಣಿಗೆಗಳಿಂದ ಮನನೊಂದು ಜೆಡಿಎಸ್ ಪಕ್ಷ ಸೇರ್ಪಡೆಗೊಂಡಿದ್ದು, ಪಟ್ಟಣದ ಅಭಿವೃದ್ಧಿ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುತ್ತೇವೆ.

ಹಿಂದೆಯಾದ ಕಹಿ ಘಟನೆಗೆ ಮನಗೂಳಿ ಪಟ್ಟಣದ ಜನತೆಯ ಕ್ಷಮೆ ಕೇಳುತ್ತೇನೆ. ಮುಂದೆ ಇಂತಹ ಯಾವುದೇ ರಾಜಕೀಯ ಬೆಳವಣಿಗೆಗಳಾದರೂ ಮರಳಿ ಹಿಂದಿನ ತಪ್ಪುಗಳನ್ನು ಮಾಡುವುದಿಲ್ಲ' ಎಂದು ಹೇಳಿ ಜೆಡಿಎಸ್‌ನ ಮುಖಂಡರು ಹಾಗೂ ಸದಸ್ಯರ ಬೆಂಬಲ ಕೋರಿದರು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ ಮಾತನಾಡಿ, ಹಿಂದಿನ ರಾಜಕೀಯದ ಕೆಟ್ಟ ಘಟನೆಗಳನ್ನು ಮರೆತು, ಮನಗೂಳಿ ಪಟ್ಟಣದ ಎಲ್ಲ ಜನತೆಯ ವಿಶ್ವಾಸಗಳಿಸಿಕೊಂಡು ಉಳಿದ ಅವಧಿಯಲ್ಲಿ ಪಟ್ಟಣದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವಂತೆ ಸಲಹೆ ನೀಡಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಜಗದೀಶ ಕೊಟ್ರಶೆಟ್ಟಿ, ಮುಖಂಡರಾದ ರವಿ ಪಟ್ಟಣಶೆಟ್ಟಿ, ಸಂಗಯ್ಯ ಕಂದಗಲ್, ಚನ್ನ ಗೌಡ ಪಾಟೀಲ, ಸುಭಾಸಗೌಡ ಪಾಟೀಲ, ಮಲ್ಲಿಕಾರ್ಜುನ ಅವಟಿ, ಅಣ್ಣುಗೌಡ ಗುಜಗೊಂಡ, ಪಿ.ಎಂ ಬನ್ನಟ್ಟಿ, ನಿಸ್ಸಾರ ಅಹಮ್ಮದ ಮಕಾಂದಾರ, ಸುರೇಶ ಚಿಂಚೋಳಿ, ನಾಗಪ್ಪ ಬನ್ನಟ್ಟಿ, ಗುರಪ್ಪ ಪದಮಗೊಂಡ, ಪಿಕೆಪಿಎಸ್ ಅಧ್ಯಕ್ಷ ಗೊಲ್ಲಾಳಪ್ಪಗೌಡ ಗುಜಗೊಂಡ, ಬಾಬು ಗುಜಗೊಂಡ, ಸೇರಿ ಅನೇಕರು ಉಪಸ್ಥಿತರಿದ್ದರು.

# ಶಿಬಿರದ ಶಿಸ್ತು ನಿತ್ಯದ ಕಾಯಕವಾಗಲಿ: ಭೂಮಣ್ಣವರ

**ಬಾಗಲಕೋಟೆ:** ಶಿಸ್ತು, ಸಂಯಮ, ಶ್ರಮದಾನ ಮತ್ತು ಯೋಗಾಭ್ಯಾಸ ಚಟುವಟಿಕೆಗಳು ಕೇವಲ ಶಿಬಿರಕ್ಕೆ ಸೀಮಿತವಾಗದೆ ದಿನನಿತ್ಯ ಜೀವನಕ್ಕೆ ಅಳವಡಿಸಿಕೊಳ್ಳಿ. ಉತ್ತಮ ಅಭ್ಯಾಸಗಳಿಂದ ವ್ಯಕ್ತಿತ್ವ ವಿಕಸಗೊಳ್ಳುತ್ತದೆ ಎಂದು ಎನ್.ಎಸ್.ಎಸ್ ಘಟಕದ ಬಾಗಲಕೋಟೆ ಜಿಲ್ಲಾ ನೋಡಲ್ ಅಧಿಕಾರಿಗಳಾದ ಡಾ.ಎಸ್.ಎಸ್ ಭೂಮಣ್ಣವರ ಹೇಳಿದರು.




ಬಸವೇಶ್ವರ ಕಲಾ ಮಹಾವಿದ್ಯಾಲಯದ ಎನ್.ಎಸ್.ಎಸ್ ಘಟಕದ ವತಿಯಿಂದ ಮುಚಖಂಡಿ ಗ್ರಾಮದಲ್ಲಿ ಹಮ್ಮಿಕೊಂಡ ಏಳು ದಿನದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು. ಪ್ರಯತ್ನದಿಂದ ಸಾಧನೆ ಸಾಧ್ಯ ಆದರೆ ಅದಕ್ಕೆ ಗುರುವಿನ ಮಾರ್ಗದರ್ಶನ ಅವಶ್ಯಕ ಅಂತಹ ಸಾಧನೆಯ ಮಾರ್ಗವನ್ನು ವಿಶೇಷ ಶಿಬಿರಗಳು ನೀಡುವ ಕೆಲಸ ಮಾಡುತ್ತವೆ ಅದನ್ನು ಬಳಕೆ ಮಾಡಿಕೊಳ್ಳುವ ಕೆಲಸವನ್ನು ನಿಮ್ಮದಾಗಬೇಕು ಎಂದರು.

ಉತ್ತಮ ಹಂತಕ್ಕೆ ಬೆಳೆಯುವ ಮೂಲಕ ಗುರುಹಿರಿಯ-ರಿಗೆ ತಲೆಬಾಗಿ ಬದುಕುವುದನ್ನು ರೂಡಿಸಿಕೊಳ್ಳಿ ಅದು ವ್ಯಕ್ತಿತ್ವದ ಸಂಕೇತವಾಗಿದೆ. ಎನ್.ಎಸ್.ಎಸ್ ಕೇವಲ ಶ್ರಮದಾನಕ್ಕೆ ಸೀಮಿತವಾಗಿರದೇ ರಾಜ್ಯಸರಕಾರ ಜಾರಿಗೆ ತರುತ್ತಿರುವ ಸಾಮಾಜಿ-ಕ ಮತ್ತು ಶೈಕ್ಷಣಿಕ ಸಮಿಕ್ಷೆ ಎಂಬ ಹೊಸ ಯೋಜನೆಯಲ್ಲಿ ಎನ್.ಎಸ್.ಎಸ್‌ಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳನ್ನು ಆಯ್ದುಕೊಂಡು ಅವರಿಗೆ ಸಮೀಕ್ಷೆಯ ತರಬೇತಿ ನೀಡುವ ಯೋಜನೆ ಸಿದ್ದಗೊಳ್ಳುತ್ತಿದ್ದು ಕೆಲವೆ ದಿನಗಳಲ್ಲಿ ಜಾ-ರಿಯಾಗಲಿದೆ. ಸಮೀಕ್ಷೆಗೆ ಬೇಕಾದ ದಾಖಲಾತಿಗಳನ್ನು ಸಾರ್ವಜನಿಕರು ಸಿದ್ದಪಡಿಸುವಂತೆ ಮಾಡುವ ಕೆಲಸವನ್ನು ಶಿಬಿರಾರ್ಥಿಗಳು ಮಾಡಬೇಕಿದೆ. ಇನ್ನು ಬಿವಿವಿ ಸಂಘದ ಶಿಕ್ಷಣ ಅಂಗಸಂಸ್ಥೆಗಳು ಎಲ್ಲ ಕಾರ್ಯಚಟುವಟಿಕೆಗಳನ್ನು ಅಚ್ಚುಕಟ್ಟಾಗಿ ಮಾಡುತ್ತ ಬರುತ್ತಿದ್ದು ಕಲಾ ಮಹಾವಿದ್ಯಾಲಯದವು ಅಚ್ಚುಕಟ್ಟಾಗಿ ಮಾದರಿ ಶಿಬಿರ ನಡೆಸಿದ್ದು ಸಂತಸ ತಂದಿದೆ ಎಂದರು.

ಪ್ರಾಚಾರ್ಯರಾದ ಎಸ್.ಆರ್ ಮೂಗನೂರ ಮಠ ಅವರು ಮಾತನಾಡಿ ಶಿಬಿರದಲ್ಲಿ ಪ್ರತಿದಿನ ಒಂದು ಹೊಸ ಯೋಜನೆ ಮತ್ತು ಆಲೋಚನೆಗಳ ಮೂಲಕ ಕಾರ್ಯಚಟುವಟಿ-ಕೆ ಮಾಡಿದಂತೆ ದಿನನಿತ್ಯವು ಹೊಸದನ್ನು ಹುಡುಕುವ ಮತ್ತು ಅಳವಡಿಸಿಕೊಳ್ಳುವ ಕೆಲಸ ಮಾಡಬೇಕು ಇದರಿಂದ ಸಮಾಜಕ್ಕೆ ಬೇಕಾದ ಯೋಗ್ಯ ನಾಗರಿಕರಾಗಿ ಬೆಳೆಯಲು ಸಾಧ್ಯ. ಬಾವನೆಗಳು ಅತಿ ಹೆಚ್ಚು ಬೆಲೆಯುಳ್ಳವುಗಳಾಗಿದ್ದು ಅವುಗಳನ್ನು ಶಿಬಿರ ಕಲಿಸಿದೆ. ನೈಸರ್ಗಿಕ ಸಂಪನ್ಮೂಲವನ್ನು ಹಿತವಾಗಿ ಮತ್ತು ಮಿತವಾಗಿ ಬಳಸುವ ಕೌಶಲ್ಯ, ಕಾರ್ಯಕ್ರಮ ನಿರ್ವಹಣೆ ರೀತಿ, ಗುಂಪು ನಿರ್ವಹಣೆ, ಸಾಮಾಜಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ಕೌಶಲ್ಯಗಳನ್ನು ಇಲ್ಲಿ ಕಲಿತಿದ್ದೀರಿ. ನಾವೆಲ್ಲರೂ ಒಂದು ಎಂಬ ಒಗ್ಗಟ್ಟು ಜಯ ಕೊಡುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್ ಘಟಕಾಧಿಕಾರಿಗಳಾದ ಡಾ. ಎಂ.ಎಚ್ ವಡ್ಡರ, ಡಾ.ವೀರುಪಾಕ್ಷಿ ಎನ್.ಬಿ, ಪ್ರಾಧ್ಯಾಪಕರುಗಳಾದ ಡಾ.ಕೆ.ವಿ ಮಠ, ಡಾ.ಎಲ್.ಎಸ್ ಚವಡಿ, ಎಸ್.ವಿ ಕಟ್ಟಿ, ನಟರಾಜ ಇಂಗಳಗಿ, ಶ್ರೇಯಾ ಜೋರಾಪೂರ ಮತ್ತು ಶಿಬಿರಾರ್ಥಿಗಳಿಗೆ ಟೀಶರ್ಟ್ ಕೊಡುಗೆ ನೀಡಿದ ಆನಂದ ಕೊಟ್ಟಗಿ, ನಾಗೇಶ ನಾಯಕ, ಕಿರಣ ಬಾಗೇವಾಡಿ, ಪ್ರಶಾಂತ ರಾಠೋಡ, ಕಿರಣ ನಾಯಕ ಸೇ-ರಿದಂತೆ ಇತರರು ಇದ್ದರು.

# ಸಂಗೀತ ಕ್ಷೇತ್ರಕ್ಕೆ ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಕೊಡುಗೆ ಅಪಾರ

**ಕಲಬುರಗಿ :** ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಅವರು ಕರ್ನಾಟಕದ ಒಬ್ಬ ಪ್ರಸಿದ್ಧ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ.

ಅವರು ಜೈಪುರ-ಅತ್ರೌಲಿ ಘರಾನಾ ಶೈಲಿಯಲ್ಲಿ ಖ್ಯಾಲ್ ಪ್ರಕಾರವನ್ನು ಹಾಡುತ್ತಿದ್ದರು. ಸಂಗೀತ ಕ್ಷೇತ್ರ-ಕ್ಕೆ ಮನ್ಸೂರ್ ಅವರ ಕೊಡುಗೆ ಅಪಾರವಾಗಿದೆ ಎಂದು ಹಿರಿಯ ಸಂಗೀತ ಕಲಾವಿದ ಹಣಮಂತರಾಯ ಮಂಗಾಣೆಹೇಳಿದರು.ನಗರದಆಳಂದ ಚೆಕ್ ಪೋಸ್ಟ್ ಸಮೀಪವಿರುವ 'ಗಾನ ಗಂಧರ್ವ ಸಂಗೀತ ಪಾಠಶಾಲೆ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ ಪಂಡಿತ ಮಲ್ಲಿಕಾರ್ಜುನ ಮನ್ಸೂರ್ ಪುಣ್ಯ ಸ್ಮರಣೆಯ ಕಾರ್ಯಕ್ರಮದಲ್ಲಿ ಸ್ವರಾಭಿಷೇಕದ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.



ಪಾಠಶಾಲೆಯ ಮುಖ್ಯಸ್ಥ ಶರಣು ಕಾಂಬಳೆ ಮಾತನಾಡಿ,

ಮನ್ಸೂರ್ ಅವರ ಕೊಡುಗೆ ಹಾಗೂ ಸೇವೆಗೆ 1970ರಲ್ಲಿ ಪದ್ಮಶ್ರೀ, 1976ರಲ್ಲಿ ಪದ್ಮ ಭೂಷಣ ಮತ್ತು 1992ರಲ್ಲಿ ಪದ್ಮವಿಭೂಷಣ ನೀಡಿ ಗೌರವಿಸಲಾಗಿದೆ.

ಅವರು ಶುದ್ಧ ನಾಟ, ಅಸಾ ಜೋಜಿಯ, ಹೇಮ್ ನಾಟ್, ಲಚಚಾ, ಖಾತ್, ಶಿವಮತ್ ಭೈರವ್, ಬಿಹಾರಿ, ಸಂಪೂರ್ಣ ಮಾಲ್ಕೌಂಸ್, ಲಾಜವಂತಿ, ಅಡಂಬರಿ ಕೇದಾರ್, ಏಕ್ ನಿಶಾದ್ ಬಿಹಾಗ್ಡಾ ಮತ್ತು ಬಹಾದುರಿ ತೋಡಿ ಮೊದಲಾದ ಅಪರೂಪದ ಮತ್ತು ಅಪ್ರಚಲಿತ ರಾಗಗಳನ್ನು ಜನಪ್ರಿಯಗೊಳಿಸಿದ್ದಾರೆ.ಸಂಗೀತ ನಿರ್ದೇಶಕ ಮತ್ತು ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿಬಳಗದಅಧ್ಯಕ್ಷಎಚ್.ಬಿ.ಪಾಟೀಲ್, ಸಂಗೀತ ಕಲಾವಿದರಾದ ಶೃತಿ, ಸ್ವಾತಿ, ಸಂಗೀತ ಪೋಷಕರಾದ ಶಿವಶರಣಪ್ಪ ಉಳಾಗಡ್ಡಿ, ಅಂಬಾರಾಯ ದುಧಗಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು. ನಂತರ ಇದೇ ಕಲಾವಿದರಿಂದ ಸಂಗೀತೋತ್ಸವದಲ್ಲಿ ಗೀತ ಗಾಯನ ಜರುಗಿತು.

# ಶಿಕ್ಷಕರು ಭವಿಷ್ಯವನ್ನು ಬೆಳಗಿಸುವ ದೀಪಗಳು: ಡಾ. ಎಮ್. ಪಿ. ನಾಡಗೌಡ

**ಬಾಗಲಕೋಟೆ :** "ಶಿಕ್ಷಕರು ವಿದ್ಯಾರ್ಥಿಗಳ ಜೀವನದ ಶಿಲ್ಪಿಗಳು. ಅವರು ಕೇವಲ ತಿಳುವಳಿಕೆ ಹಂಚುವುದಷ್ಟೇ ಅಲ್ಲ, ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ಎದುರಿಸುವ ಶಕ್ತಿ ಮತ್ತು ಪ್ರೇರಣೆಯನ್ನು ನೀಡುತ್ತಾರೆ. ಹಾಗಾಗಿ ಶಿಕ್ಷಕರು ಭವಿಷ್ಯವನ್ನು ಬೆಳಗಿಸುವ ದೀಪಗಳು" ಎಂದು ಮಾಜಿ ವಿಧಾನ ಪರಿಷತ್ತು ಸದಸ್ಯರಾದ ಡಾ. ಎಮ್. ಪಿ. ನಾಡಗೌಡ ಹೇಳಿದರು.

ನಗರದ ಸಕ್ರಿ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ವಿದ್ಯಾ ಪ್ರಸಾರಕ ಮಂಡಳದ ವತಿಯಿಂದ ಆಯೋಜಿಸಲಾದ ಶಿಕ್ಷಕರ ದಿನಾಚರಣಾ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. "ನನ್ನ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿರುವ ಶಿಕ್ಷಕರ ಕುರಿತು ಮಾತನಾಡುವುದು ನನಗೆ ಹೆಮ್ಮೆ. ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ಅರಿತು ಅವರಲ್ಲಿರುವ



ಪ್ರತಿಭೆಯನ್ನು ಹೊರತೆಗೆದು ಬೆಳೆಸುವ ಕೌಶಲ್ಯ ಶಿಕ್ಷಕರಿಗಿರಬೇಕು" ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ಗಿರೀಶ ವಿದ್ಯಾ ಪ್ರಸಾರಕ ಮಂಡಳದ ಗೌರವ ಕಾರ್ಯದರ್ಶಿ ಮಾಸೂರಕರ ಮಾತನಾಡಿ, "ಶಿಕ್ಷಕರು ತಾಳ್ಮೆ, ಪ್ರೀತಿ, ಕರುಣೆಯಿಂದ ವಿದ್ಯಾರ್ಥಿಗಳ ತಪ್ಪುಗಳನ್ನು ತಿದ್ದಿ ಸರಿಯಾದ ದಾರಿ ತೋರಿಸುತ್ತಾರೆ. ವಿದ್ಯಾರ್ಥಿಗಳ ಯಶಸ್ಸಿನಲ್ಲಿ ಶಿಕ್ಷಕರ ಕೊಡುಗೆ ಅಪಾರವಾದ್ದು, ಅವರ ಋಣವನ್ನು ಎಂದಿಗೂ ತೀರಿಸಲು ಸಾಧ್ಯವಿಲ್ಲ" ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಚ್.ಎಸ್. ಗಿಡಗಂಟಿ ಹಾಗೂ ಎಂ.ಎಸ್. ಶಟವಾಜಿ ಅವರನ್ನು ಸನ್ಮಾನಿಸಲಾಯಿತು. ಹಾಗೆಯೇ ಡಾ. ಎಮ್.ಪಿ. ನಾಡಗೌಡರಿಗೂ ಗೌರವ ಸನ್ಮಾನ ನೆರವೇರಿಸಲಾಯಿತು.

ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸಿದ್ದ ವಿ.ವಾಯ್. ಕವಠೇಕರ, ವಿದ್ಯಾ ಪ್ರಸಾರಕ ಮಂಡಳದ ಕಾರ್ಯಧ್ಯಕ್ಷೆ ಶ್ರೀಮತಿ ಶ್ರೀಲತಾ ಹೆರಂಜಲ ಸ್ವಾಗತಿಸಿದರು. ಪ್ರಾಚಾರ್ಯ ಅಶೋಕ ಕಂದಗಲ್ಲ ಅತಿಥಿಗಳನ್ನು ಪರಿಚಯಿಸಿದರು. ಪ್ರಾಚಾರ್ಯ ಶ್ರೀನಿವಾಸ ನರಗುಂದ ಹಾಗೂ ಬಿ. ಹೆಚ್. ಲಮಾಣಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಡಾ. ಪಿ.ಆರ್. ಜೋಶಿ ವಂದಿಸಿದರು. ಡಾ. ಉಮೇಶ ತಿಮ್ಮಾಪುರ ಕಾರ್ಯಕ್ರಮವನ್ನು ನಿರೂಪಿಸಿದರು.

ವಿದ್ಯಾ ಪ್ರಸಾರಕ ಮಂಡಳದ ಕಾರ್ಯಕಾರಿ ಸಮಿತಿ ಸದಸ್ಯರು, ವಿವಿಧ ಅಂಗಸಂಸ್ಥೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


# ನದಿಪಾತ್ರದ ಜನರು ಎಚ್ಚರಿಕೆಯಿಂದ ಇರಲು; ಅರುಣಕುಮಾರ ಪಾಟೀಲ ಮನವಿ

**ಅಫಜಲಪೂರ :** ಇತ್ತೀಚೆಗೆ ಅಪಾರ ಪ್ರಮಾಣದ ಮಳೆಯಾಗಿರುವ ಹಿನ್ನೆಲೆ ಮತಕ್ಷೇತ್ರದ ಕೆಲವು ನದಿ, ಕೊಳ್ಳಗಳು ತುಂಬಿ ಹರಿಯುತ್ತಿರುವುದರಿಂದ ಮಣ್ಣೂರ ,

ಕರ್ಜಗಿ ಸಂಚರಿಸುವ ರಸ್ತೆ ಹಾಗೂ ಜೇವರ್ಗಿ(ಬಿ), ಜೇವರ್ಗಿ (ಕೆ) ದಿಕ್ಸಂಗಾ (ಕೆ) ತೆಲ್ಲೂಣಗಿ

ಗ್ರಾಮಗಳಲ್ಲಿ ಮಹಾರಾಷ್ಟ್ರಯಿಂದ ಹೆಚ್ಚು ನೀರು ಬಿಟ್ಟಿರುವ ಕಾರಣ ಗ್ರಾಮದ

ಮನೆಗಳಲ್ಲಿ ನೀರು ಹೊಕ್ಕಿಕೊಂಡು



ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಕೆಪಿಸಿಸಿ ಸದಸ್ಯರು ಹಾಗೂ ಹೆಚ್ಕೆಇ ಶಿಕ್ಷಣ ಮಂಡಳಿ ನಿರ್ದೇಶಕರಾದ ಅರುಣಕುಮಾರ ಎಂ. ವೈ.ಪಾಟೀಲ ತಿಳಿಸಿದರು.

ಈಗಾಗಲೇ ಮಾನ್ಯ ಶಾಸಕರು ಹಾಗೂ ತಾಲೂಕ ಆಡಳಿತ, ಪೊ?ಲಿಸ್ ಇಲಾಖೆಯ ಅಧಿಕಾರಿಗಳು, ತಾಲೂಕ ಕಾರ್ಯನಿರ್ವಾಹಕ ಅಧಿಕಾರಿ, ಪಿಡಿಒಗಳ ಮತ್ತುಗ್ರಾಮಲೆಕ್ಕಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ವಿಷಯ ತಿಳಿದುಕೊಂಡು ತಾಲೂಕ್ ಆಡಳಿತ ಸ್ಥಳಕ್ಕೆ ಭೇಟಿ ನೀಡಿ ಜಲಾವೃತಗೊಂಡ ಮನೆಗಳ

ಜನರುಗಳನ್ನುಬೇರೆಕಡೆವರ್ಗಾಯಿಸಿ ಗಂಜಿ ಕೇಂದ್ರಗಳು ಸ್ಥಾಪನೆ ಮಾಡಲು ಸೂಚಿಸಲಾಗಿದೆ ಎಂದು ಪಾಟೀಲ ಹೇಳಿದರು.

ಪ್ರವಾಹದ ಮಧ್ಯೆ ವಾಹನಗಳನ್ನು ಚಲಾಯಿಸುವುದು ಅಪಘಾತಕ್ಕೆ ಅನುವು ಮಾಡಿಕೊಟ್ಟಂತೆ. ಇಂತಹ ಅಪಾಯಕಾರಿಯಾದ ಹುಚ್ಚು ಸಾಹಸಗಳಿಗೆ ಯಾರೂ ಕೈಹಾಕಬೇಡಿ. ನಮ್ಮ ತಾಲೂಕ ಆಡಳಿತ ಮುಂಜಾಗ್ರತಾ ಕ್ರಮಗಳನ್ನು ಸಜ್ಜಾಗಿ ಕೈಗೊಂಡಿದ್ದು,

ನದಿ ಪಾತ್ರದಲ್ಲಿರುವ ನಾಗರಿಕರು ಹೆಚ್ಚು ಎಚ್ಚರಿಕೆಯಿಂದರಲು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಎಂದು ಅರುಣಕುಮಾರ ಪಾಟೀಲ ಪತ್ರಿಕಾ ಹೇಳಿಕೆ ಮೂಲಕ ತಿಳಿಸಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State